# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:261 • ನೋಂದಣಿ ನಂ.:KARKAN27911 • ವಿಜಯನಗರ • 13.03.2024 • ಬುಧವಾರ • ಪುಟ:04 • ಬೆಲೆ:2

Volume:01 • Issue:261 • Reg.No:KARKAN27911 • VIJAYANAGARA • 13.03.2024 • Wednesday • Page:04 • Rs:2



MASSEY FERGUSON

RRR GROUP
RUNNING HARD. DREAMING BIG



ರೈತರಿಗೆ ವಿಜಯಶ್ರೀ ಮೋಟಾರ್ಸ್‌ನಿಂದ

ಮಹಾಕೊಡುಗೆ

ರೈತನ ರಾಜ MF245 (Quadra PTO) ಆಲ್‌ರೌಂಡರ್ ಟ್ರ್ಯಾಕ್ಟರ್ ಖರೀದಿಸಿ,
ಟ್ರ್ಯಾಕ್ಟರ್‌ನೊಂದಿಗೆ 5ರ ಬಲರಾಮ ಮಡಕಿ ಉಚಿತವಾಗಿ ಪಡೆಯಿರಿ



ಉಚಿತ
TAFE
TP,
Registration,
Insurance,
LTT
10 ದಿನ ಮಾತ್ರ
* ಷರತ್ತುಗಳು ಅನ್ವಯಿಸುತ್ತವೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ: ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ), ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ–583239, ಮೊ: 9980127607,7353306719


## ಬದಲಾದ ರಾಜ್ಯ ಸರ್ಕಾರದಲ್ಲಿ ರೈತರ ಯೋಜನೆ ನೆನೆಗುದಿಗೆ

### ಬಿಟ್ಟಿ ಭಾಗ್ಯಗಳ ಜಾರಿ । ರೈತರ ಕಡೆಗಣಿಸಿದ ಸರ್ಕಾರ

### ಏತನೀರಾವರಿ ಯೋಜನೆ ಪಾದಯಾತ್ರೆಯಲ್ಲಿ ಶಾಸಕ ನೇಮಿರಾಜ ಆಕ್ರೋಶ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ರಾಜ್ಯದ ಜನತೆಗೆ ಬಿಟ್ಟಿ ಭಾಗ್ಯಗಳನ್ನು ನೀಡಿ ರೈತರನ್ನು ಕಡೆಗಣಿಸಿರುವ ಸರ್ಕಾರಕ್ಕೆ ನಾಚಿಕೆಯಾಗಬೇಕು ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ಸರ್ಕಾರದ ವಿರುದ್ಧ ಕಿಡಿಕಾರಿದರು.

ಪಟ್ಟಣದ ಬಸವೇಶ್ವರ ಪುತ್ಥಳಿಯ ಬಳಿ ನಡೆದ ರಾಜ್ಯ ರೈತಸಂಘದ ನೇತೃತ್ವದಲ್ಲಿ, ಚಿಲುಗೋಡು ಗ್ರಾಮದ ಹತ್ತಿರದಲ್ಲಿರುವ, ಮಾನಮಟ್ಟಿ ಬೆಂಚಿಕಟ್ಟಿ ಏತ ನೀರಾವರಿ ಯೋಜನೆ ಹೋರಾಟ ಸಮಿತಿಯಿಂದ ಯೋಜನೆ ಅನುಷ್ಠಾನಕ್ಕಾಗಿ ಮಂಗಳವಾರ ಚಿಲಗೋಡು ಶ್ರೀ ಕರಿಯಮ್ಮ ದೇಗುಲದಿಂದ ಕೈಗೊಂಡ ಪಾದಯಾತ್ರೆಯ ನಂತರ, ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ನನ್ನ ಮೊದಲ ಅವಧಿಯಲ್ಲಿ ಕ್ಷೇತ್ರದ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಲಾಗಿತ್ತು. ಅದರಂತೆ ಚಿಲವಾರು ಬಂಡಿ ಏತನೀರಾವರಿ ಯೋಜನೆ, ಕುದುರೆ ಕಾಲೂವೆ, ನದಿ ಹಿನ್ನೀರಿನ ಸೌಲಭ್ಯ ಪಡೆಯಲು ಏತ ನೀರಾವರಿ ಯೋಜನೆಗಳ ಅಭಿವೃದ್ಧಿ ಹೀಗೆ ಹತ್ತು ಹಲವು ಯೋಜನೆಗಳ ಅನುಷ್ಠಾನಕ್ಕಾಗಿ ಪ್ರಯತ್ನದಲ್ಲಿ ನಂದಿದುರ್ಗ ಹಾಗೂ ಮರಬ್ಬಿಹಾಳ್ ಯೋಜನೆಗಳಿಗೂ ಬಜೆಟ್‌ನಲ್ಲಿ ಘೋಷಣೆಯಾಗಿದ್ದವು. ಆದರೆ, ಬದಲಾದ ಸರ್ಕಾರದಲ್ಲಿ ಎಲ್ಲಾ ಯೋಜನೆಗಳು ನೆನೆಗುದಿಗೆ ಬಿದ್ದವು ಎಂದು ಬೇಸರ ವ್ಯಕ್ತಪಡಿಸಿದ ಅವರು, ಕಳೆದ 10ವರ್ಷದ ಅವಧಿಯಲ್ಲಿ ಕ್ಷೇತ್ರದಲ್ಲಿ ರೈತರ ಮೂಗಿಗೆ ತುಪ್ಪ ಹಚ್ಚುವ ಕೆಲಸವಾಗಿದೆ, ಜೊತೆಗೆ ಮಾಲವಿ ಜಲಾಶಯದ ನೀರನ್ನು ವ್ಯರ್ಥವಾಗಿ ಕಾಲುವೆ ಗೇಟ್ ಕೀಳಿಸುವ ಮೂಲಕ, ದುಂದುವೆಚ್ಚವಾಗಲು ಕಾರಣರಾಗಿದ್ದಾರೆ ಎಂದು ಮಾಜಿ ಶಾಸಕ ವಿರುದ್ಧ ಕಿಡಿಕಾರಿದರು.

ನಿಮ್ಮ ಬೇಡಿಕೆಯ ಧ್ವನಿಯಾಗಿ ನಾನು ಕೆಲಸಮಾಡುವೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವೆ ಎಂದು ಮನವಿ ಸಲ್ಲಿಸಿದ ರೈತರಿಗೆ ಭರವಸೆ ನೀಡಿದರು. ಇದೇ ವೇಳೆ ರಾಜ್ಯ ರೈತ ಸಂಘದ ರಾಜ್ಯಾ ಉಪಾಧ್ಯಕ್ಷ ಜೆ.ಎಂ.ವೀರಸಂಗಯ್ಯ, ಬೆಂಬಲನೀಡಿದ ಜಿ.ಪಂ.ಮಾಜಿ ಸದಸ್ಯ ಅಕ್ಕಿ ತೋಟೇಶ್, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಗೋಣಿಬಸಪ್ಪ ಮತ್ತಿತರರು ಮಾತನಾಡಿದರು. ರೈತ ಸಂಘದ ಗುಲ್ಬರ್ಗ ವಿಭಾಗೀಯ ಸಂಚಾಲಕ ಗೋಣೆಪ್ಪ ಪ್ರತಿಭಟನೆಯನ್ನುದೇಶಿಸಿ ಮಾತನಾಡಿದರು. 16.ಕಿ.ಮೀ.ಗಳಷ್ಟು ಪಾದಯಾತ್ರೆಯುದ್ದಕ್ಕೂ ವಿವಿಧ ಘೋಷಣೆ ಕೂಗುತ್ತಾ ಸುಡುಬಿಸಿಲನ್ನು ಲೆಕ್ಕಿಸದೆ ರೈತ ಮಹಿಳೆಯರು, ರೈತರು ಸಾಗಿ ಬಂದರು.



> **ಈ ಯೋಜನೆ ಸುಮಾರು 11ವರ್ಷಗಳ ಕೆಳಗೆ ಆರಂಭವಾಗಿತ್ತು, 2023ರಲ್ಲಿ ಸರ್ಕಾರಕ್ಕೆ ಮನವಿಪತ್ರ ಕೂಡ ಸಲ್ಲಿಸಲಾಗಿತ್ತು. ಆದರೆ, ಈ ಕ್ಷೇತ್ರದ ಅಂದಿನ ಶಾಸಕ ಎಸ್.ಭೀಮಾನಾಯ್ಕ್ ನಮ್ಮನ್ನು ಚನ್ನಾಗಿ ಬಳಸಿಕೊಂಡು, ಕೆಲಸ ಮಾಡಿಸುವುದಾಗಿ ಭರವಸೆ ನೀಡಿ ಕೈಕೊಟ್ಟರು. ನಾವು ಸರಿಯಾಗಿಯೇ ಪಾಠಕಲಿಸಿದ್ದೇವೆ. ಈ ಬಾರಿ ಹಾಲಿ ಶಾಸಕ ಕೆ.ನೇಮಿರಾಜ್‌ನಾಯ್ಕ್ ಭರವಸೆ ನೀಡಿದ್ದಾರೆ. ಕಾದು ನೋಡೋಣ. ಕೈಕೊಟ್ಟರೆ ವಿಧಾನ ಸೌಧದವರೆಗೂ ಹೋರಾಡುತ್ತೇವೆ. ರೈತರಾದ ನಾವು ಮತ್ತೊಮ್ಮೆ ಪಾಠಕಲಿಸುತ್ತೇವೆ.**
>
> **– ಗೋಣೆಪ್ಪ, ರವಿಕುಮಾರ್**
> ತಂಬ್ರಹಳ್ಳಿ. ರಾಜ್ಯ ರೈತ ಸಂಘ.

## ಹೊಸ ವಿದ್ಯುತ್ ಲೈನ್ ವಿದ್ಯುದ್ದೀಕರಣ: ಎಚ್ಚರಿಕೆಯಿಂದಿರಲು ಜನರಿಗೆ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಹೊಸಹಳ್ಳಿ, ಲೋಕಿಕೆರೆ, ಪೂಜರಾಹಳ್ಳಿ ಮತ್ತು ಹೂಡೇಂ ಗ್ರಾಮಗಳ ವ್ಯಾಪ್ತಿಯಲ್ಲಿ ಹೊಸ ವಿದ್ಯುತ್ ಲೈನ್ ವಿದ್ಯುದ್ದೀಕರಣ ಮಾಡಲಾಗುತ್ತಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಸೂಚಿಸಲಾಗಿದೆ.

ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ, ಹೂಡೇಂ ಗ್ರಾಮದಲ್ಲಿ 1+8, ಎಂವಿಎ, 66/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 66ಕೆ.ವಿ ದ್ವಿಪತ ಗೋಪುರಗಳ 66ಕೆ.ವಿ.ಸಿಂಗಲ್ ಸರ್ಕ್ಯುರ್ಟ ವಿದ್ಯುತ್ ಪ್ರಸರಣ ಮಾರ್ಗವನ್ನು ಹಾಲಿ ಇರುವ 66/11 ಕೆ.ವಿ ಖಾನಾಹೊಸಹಳ್ಳಿ ವಿದ್ಯುತ್ ಉಪ ಕೇಂದ್ರದಿಂದ ಪ್ರಸ್ತಾಪಿತ 66/11 ಕೆ.ವಿ. ಹುಡೆಮ್ ಉಪ ಕೇಂದ್ರಕ್ಕೆ 15.104 ಕಿಲೋಮೀಟರ ಉದ್ದದ ಪ್ರಸರಣ ಮಾರ್ಗವನ್ನು ನಿರ್ಮಿಸಲಾಗಿರುತ್ತದೆ. ಈ ವಿದ್ಯುತ್ ಪ್ರಸರಣ ಮಾರ್ಗವು ಹೊಸಹಳ್ಳಿ, ಲೋಕಿಕೆರೆ, ಪೂಜರಾಹಳ್ಳಿ ಮತ್ತು ಹೂಡೇಂ ಗ್ರಾಮಗಳ ವ್ಯಾಪ್ತಿಯಲ್ಲಿ ಹಾದುಹೋಗಿರುತ್ತದೆ.

ಈ ಪ್ರಸರಣ ಮಾರ್ಗವನ್ನು ಮಾರ್ಚ್ 20ರಂದು ಅಥವಾ ನಂತರದ ದಿನಗಳಲ್ಲಿ ವಿದ್ಯುದ್ದಿಕರಿಸಲಾಗುವುದು. ಆದಕಾರಣ ಸಾರ್ವಜನಿಕರು ಈ ಮಾರ್ಗದ ವಿದ್ಯುತ್ ಗೋಪುರಗಳನ್ನು ಹತ್ತುವುದಾಗಲಿ, ಅವುಗಳಿಗೆ ದನಕರುಗಳನ್ನು ಕಟ್ಟುವುದಾಗಲಿ, ಹಸಿರು ಬಳ್ಳಿ. ಗಿಡದ ಟೊಂಗೆಗಳನ್ನು ಅಥವಾ ಲೋಹದ ತಂತಿಗಳನ್ನು ಎಸೆಯುವುದಾಗಲಿ ಮಾಡಬಾರದು. ಇದರಿಂದ ಸಾರ್ವಜನಿಕರ ಆಸ್ತಿ–ಪಾಸ್ತಿ ಹಾಗೂ ಪ್ರಾಣಕ್ಕೆ ಹಾನಿಯಾಗುವ ಸಂಭಾವವಿರುತ್ತದೆ. ಮೇಲೆ ತಿಳಿಸಿರುವ ಯಾವುದೇ ದುಷ್ಕೃತ್ಯಗಳನ್ನು ಎಸಗಿದಾಗ ಅಪಘಾತ ಅಥಾವ ಹಾನಿ ಉಂಟಾದಲ್ಲಿ ಅಂತಹ ಹಾನಿಗೆ ಕೃತ್ಯಗಳನ್ನು ಎಸಗಿದವರೇ ಜವಾಬ್ದಾರರಾಗಿರುತ್ತಾರೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ಬೃಹತ್ ಕಾಮಗಾರಿ ಬಳ್ಳಾರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.


**ಬೇಕಾಗಿದ್ದಾರೆ**

ಹೊಸಪೇಟೆಯಲ್ಲಿ ಕೆಲಸ ಮಾಡಲು ಸಧೃಢ ಯುವಕರು
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೆಕ್ಯೂರಿಟಿ ಸೂಪರ್ ವೈಸರ್
ಹುದ್ದೆಗೆ ಬೇಕಾಗಿದ್ದಾರೆ.
ವಯೋಮಿತಿ:
21 ರಿಂದ 40 ವರ್ಷ
ವಿದ್ಯಾರ್ಹತೆ: SSLC/PUC
(ಅನುಭವವಿದ್ದವರಿಗೆ ಆಧ್ಯತೆ)
ಆಸಕ್ತರು ಸಂಪರ್ಕಿಸಿ
97411 94787
95911 83772



ಹಂಪಿ ಟೈಮ್ಸ್ e-paper
ವಿಜಯನಗರದ ಹೆಮ್ಮೆ
REACH EVERY WHERE NO BORDER




9448633038
www.hampitimes.com


## ಕೊಟ್ಟೂರು ತಾಲೂಕಿನಾದ್ಯಂತ ನೀರಿನ ಸಮಸ್ಯೆ ನೀಗಲು ತಾಪಂ ಸರ್ವರೀತಿಯಲ್ಲಿಯೂ ಸನ್ನದ್ಧ

### ಕೊಟ್ಟೂರು ತಾಪಂ ಇಒ ರವಿಕುಮಾರ್.ವೈ ಹೇಳಿಕೆ

**ಹಂಪಿ ಟೈಮ್ಸ್ ಕೊಟ್ಟೂರು**



ಬರಗಾಲಕ್ಕೆ ತುತ್ತಾಗಿರುವ ಕೊಟ್ಟೂರು ತಾಲೂಕಿನ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ತಾಲೂಕು ಪಂಚಾಯಿತಿ ಆಡಳಿತ ಸರ್ವರೀತಿಯಲ್ಲಿಯೂ ಸಿದ್ದವಾಗಿದೆ ಎಂದು ತಾಪಂ ಇಒ ರವಿಕುಮಾರ್.ವೈ ಹೇಳಿದರು.

ಪತ್ರಿಕೆಯೊಂದಿಗೆ ಮಂಗಳವಾರ ಕುಡಿಯುವ ನೀರಿನ ಸಮಸ್ಯೆ ಕುರಿತು ಮಾತನಾಡಿ, ತಾಲೂಕಿನಲ್ಲಿ ಒಟ್ಟು 61 ಹಳ್ಳಿಗಳಿದ್ದು, ಇವುಗಳಲ್ಲಿ 31ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಗುರುತಿಸಲಾಗಿದೆ.

ತಾಲೂಕಿನ ನಿಂಬಳಗೆರೆ, ಉಜ್ಜಿನಿ, ನಾಗರಕಟ್ಟೆ ಈ ಮೂರು ಗ್ರಾಮ ಪಂಚಾಯಿತಿಗಳಲ್ಲಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಪ್ರತಿ ತಿಂಗಳಿಗೆ 20 ಸಾವಿರ ರೂ. ಲೆಕ್ಕದಲ್ಲಿ ರೈತರ ಆರು ಕೊಳವೆಬಾವಿಗಳನ್ನು ಬಾಡಿಗೆ ಪಡೆದು ಇವುಗಳಿಂದ ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು 2023 ಡಿಸೆಂಬರ್ 4 ರಿಂದಲೇ ಸರ್ಕಾರ ಆದೇಶ ನೀಡಿದೆ ಎಂದು ಮಾಹಿತಿ ನೀಡಿದರು. ಜಲ ಸಂರಕ್ಷಣಾ ಯೋಜನೆಯಲ್ಲಿ ಕೊಳವೆಬಾವಿಗಳ ಅಂತರ್ಜಲವನ್ನು ವೃದ್ದಿಸಿಕೊಳ್ಳಲು ನರೇಗಾ ಯೋಜನೆಯನ್ನು ರೈತರು ಸದುಪಯೋಗ ಪಡಿಸಿಕೊಳ್ಳಬಹುದು. ಕೊಟ್ಟೂರು ತಾಲೂಕಿನಲ್ಲಿ ಯಾವುದೇ ನದಿ, ತೊರೆ ಹರಿಯದಿರುವುದರಿಂದ ರೈತರು ಮತ್ತು ಸಾರ್ವಜನಿಕರು ಅಂತರ್ಜಲವನ್ನೇ ಅವಲಂಭಿಸಬೇಕಾಗಿರುವುದರಿಂದ, ಮಿತವಾಗಿ ನೀರನ್ನು ಬಳಕೆ ಮಾಡಬೇಕು ಎಂದರು. ಗ್ರಾಮಗಳಲ್ಲಿ ವ್ಯರ್ಥವಾಗಿ ನಳಗಳ ಮೂಲಕ ನೀರು ಹರಿಯಲು ಬಿಡಬಾರದು. ವಿನಾಕಾರಣ ನೀರು ನಳಗಳ ಮೂಲಕ ಹರಿಯವುದು ಕಂಡು ಬಂದಲ್ಲಿ ಸಂಬಂಧಿಸಿದ ವ್ಯಕ್ತಿಯ ಮೇಲೆ ಕಠಿಣ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

## ಮತ್ಸ್ಯವಾಹಿನಿ ವಾಹನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಮೀನುಗಾರಿಕೆ ಇಲಾಖೆಯಿಂದ ಮತ್ಸ್ಯ ವಾಹಿನಿ ವಾಹನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಪರಿಸರ ಸ್ನೇಹಿ ಕಿಯೋಸ್ಕ್ ಮತ್ಸ್ಯ ವಾಹಿನಿ ಯೋಜನೆಯಡಿ ಅರ್ಹ ಮೀನು ಮಾರಾಟಗಾರರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ಮಂಗಳೂರು ಪ್ರಾಂಚೈಸಿಗಳು, ಸರ್ಕಾರದ ವಿವಿಧ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ತರಬೇತಿ ಪಡೆದ ಮೀನುಗಾರರ ಉತ್ಪಾದಕ ಸಂಸ್ಥೆಗಳು (ಎಫ್.ಎಫ್.ಪಿ.ಓ), ಮೀನುಗಾರಿಕೆ ಸಹಕಾರ ಸಂಘಗಳು, ಮಹಿಳಾ ಸ್ವಸಹಾಯ ಗುಂಪುಗಳು, ನಿರುದ್ಯೋಗಿ ಯುವಕ ಯುವತಿಯರು, ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಫಲಾನುಭವಿಗಳಿಂದ ಪ್ರತಿ ಮಾಹೆ ರೂ. 3000 ಶುಲ್ಕದಂತೆ ಪರವಾನಗಿ ಮುಖಾಂತರ ಮತ್ಸ್ಯ ವಾಹಿನಿ ವಾಹನಗಳನ್ನು ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ಅಭ್ಯರ್ಥಿಗಳು ರೂ. 1 ಲಕ್ಷ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಮಹಿಳಾ ಫಲಾನುಬವಿಗಳೂ ರೂ. 50 ಸಾವಿರ. ಪ್ರಾರಂಭಿಕ ಭದ್ರತಾ ಠೇವಣಿ ಪಾವತಿಸಬೇಕಾಗಿರುತ್ತದೆ. ಅರ್ಜಿ ಸಲ್ಲಿಸಲು ಮಾರ್ಚ್ 16 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರುಗಳಾದ ಹೊಸಪೇಟೆ ಮೊ.ಸಂ: 9620177588, ಕೂಡ್ಲಿಗಿ ಮೊ.ಸಂ: 8217725319, ಹಡಗಲಿ ಮೊ.ಸಂ: 9620177588, ಹರಪನಹಳ್ಳಿ ಮೊ.ಸಂ:8951531330 ಹಾಗೂ ಮೀನುಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ/ವಿಜಯನಗರ ಮೊ.ಸಂ: 9449593156 ಇವರಿಗೆ ಸಂಪರ್ಕಿಸಬಹುದಾಗಿದೆ ಎಂದು ಹೊಸಪೇಟೆಯ ಮೀನುಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ

## ಶ್ರೀ ತಾಯಮ್ಮ ಶಕ್ತಿ ಸಂಸ್ಥೆಯಿಂದ ಉಚಿತ ಟೈಲರಿಂಗ್ ತರಬೇತಿ

### ಸಂಸ್ಥೆಯ ನಿರ್ದೇಶಕಿ ಕವಿತಾಈಶ್ವರ್‌ಸಿಂಗ್ ಹೇಳಿಕೆ । ಸ್ವಾವಲಂಬನೆಗೆ ಸಹಕಾರಿ



**ಹಂಪಿ ಟೈಮ್ಸ್ ಹೊಸಪೇಟೆ**

ಪ್ರತಿಯೊಬ್ಬ ಮಹಿಳೆ ತಮಗಿಷ್ಟವಾದ ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ಅಗತ್ಯ ಶಿಕ್ಷಣ, ತರಬೇತಿ ಪಡೆದು ಸ್ವಾಭಿಮಾನಿ ಬದುಕು ಕಟ್ಟಿಕೊಳ್ಳಬೇಕು. ತಾಯಮ್ಮ ಶಕ್ತಿ ಸಂಸ್ಥೆಯಿಂದ ಮಹಿಳೆಯರಿಗೆ ಮೂರು ತಿಂಗಳ ಅವಧಿಗೆ ಉಚಿತ ಟೈಲರಿಂಗ್ ತರಬೇತಿ ಆರಂಭಿಸಿದ್ದು, ಪ್ರಯೋಜನ ಪಡೆದು ಸ್ವಾವಲಂಬಿಗಳಾಗಬೇಕು ಎಂದು ತಾಯಮ್ಮ ಶಕ್ತಿ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕಿ ಕವಿತಾ ಈಶ್ವರಸಿಂಗ್ ಹೇಳಿದರು.

ನಗರದ ಸಂಸ್ಥೆಯ ಕಚೇರಿಯಲ್ಲಿ ಮಂಗಳವಾರ ಟೈಲರಿಂಗ್ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದರು. ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಕೌಶಲ್ಯಗಳ ತರಬೇತಿಯನ್ನು ನಾಲ್ವರು ಶಿಕ್ಷಕಿಯರಿಂದ ತರಬೇತಿ ನೀಡಲಾಗುತ್ತಿದೆ. ಆಧುನಿಕ ತಂತ್ರಜ್ಞಾನ ಮಷಿನ್‌ನಲ್ಲಿ ಟೈಲರಿಂಗ್, ಸೀರೆಗೆ ಕುಚ್ಚ ಹಾಕುವುದು, ಮಗ್ಗಮ್, ಸೀರಿಗಳಿಗೆ ಪೇಂಟಿಂಗ್ ಸೇರಿದಂತೆ ನವನವೀನ ಶೈಲಿಯ, ಆಕರ್ಷಕ ಫ್ಯಾಶನ್ ಉಡುಗೆಗಳ ಮಾಹಿತಿಯೊಂದಿಗೆ ತರಬೇತಿಗೊಳಿಸಲಾಗುವುದು. ತರಬೇತಿ ನಂತರ ಉದ್ಯೋಗ ಆರಂಭಿಸಲು ಸಂಘದಿಂದ ಲೋನ್ ಸೌಲಭ್ಯ ಕಲ್ಪಿಸಲಾಗುವುದು. ತರಬೇತಿ ಪಡೆದವರಿಗೆ ಸರ್ಟಿಫಿಕೇಟ್ ನೀಡಲಾಗುತ್ತದೆ. ಈಗಾಗಲೇ ತರಬೇತಿ ಪಡೆದವರಿಗೂ ಹೊರಗಡೆ ಟೈಲರಿಂಗ್ ವೃತ್ತಿಯಲ್ಲಿ ತೊಡಗಸಿಕೊಂಡವರು ಸಂಸ್ಥೆಯಲ್ಲಿ ಕೆಲಸ ಮಾಡಲು ಇಚ್ಛಿಸಿದಲ್ಲಿ ಉದ್ಯೋಗವನ್ನು ನೀಡಲಾಗುವುದು. ಪೂಜಾ, ಸುಧಾ, ಶೋಭ ಮತ್ತು ಶೋಭಾ ನಾಲ್ವರು ಫ್ಯಾಶನ್ ಡಿಸೈನಿಂಗ್ ಹೊಲಿಗೆ ತರಬೇತಿ ನೀಡಲಿದ್ದಾರೆ ಎಂದರು. ಮುಖಂಡರಾದ ಲಲಿತಾ, ಚನ್ನಮ್ಮ, ಪರಿಮಳ, ಪ್ರೀತಿ ಪವಾರ್, ಸುವರ್ಣಮ್ಮ ವಿಜಯಕುಮಾರಿ, ರಂಗಮ್ಮ, ತರಬೇತುದಾರರು ಇತರರು ಇದ್ದರು.

## ಚರಪಟ್ಟಾಧಿಕಾರ ಮಹೋತ್ಸವಕ್ಕೆ ಬಸವ ಬುತ್ತಿ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಸಮೀಪದ ಜಿ.ನಾಗಲಾಪುರದ ಶ್ರೀಗುರು ಒಪ್ಪತ್ತೇಶ್ವರಸ್ವಾಮಿ ವಿರಕ್ತಮಠದ, ನಿರಂಜನಪ್ರಭು ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವದ ನಿಮಿತ್ತ, ನಡೆಯುತ್ತಿರುವ ಯಡೆಯೂರು ಸಿದ್ದಲಿಂಗೇಶ್ವರ ಪುರಾಣದ ಭಾಗವಾಗಿ ಸೋಮವಾರ ಬ್ಯಾಲಕುಂದಿ, ಗರಗ ಗ್ರಾಮಗಳ ಮಹಿಳೆಯರು ಬಸವ ಬುತ್ತಿ ಹೊತ್ತು ತಂದು ಭಕ್ತಿ ಸಮರ್ಪಿಸಿದರು.

ಈ ಸಂಧರ್ಭದಲ್ಲಿ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು, ನಿಯೋಜಿತ ಶ್ರೀನಿರಂಜನಪ್ರಭು ದೇಶಿಕರು,ಸೋಮಸಮುದ್ರದ ಸಿದ್ದಲಿಂಗದೇಶಿಕರು, ಶ್ರೀಧರಗಡ್ಡೆಯ ಮರಿಕೊಟ್ಟೂರುದೇಶಿಕರು, ಬೂದಗುಂಪದ ಸಿದ್ದೇಶ್ವರ ದೇಶಿಕರು,ದರೂರಿನ ಕೊಟ್ಟೂರು ಮಹಾಸ್ವಾಮಿಗಳು ಉಪಸ್ಥಿತರಿದ್ದರು.

## ವಚನ ಅರಿವು

# ಶುಭಗಳಿಗೆ ಎಲ್ಲಿದೆ?

**ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ,**
**ರಾಶಿಕೂಟ ಋಣ ಸಂಬಂಧವುಂಟೆಂದು ಹೇಳಿರಯ್ಯಾ,**
**ಚಂದ್ರಬಲ ತಾರಬಲವುಂಟೆಂದು ಹೇಳಿರಯ್ಯಾ,**
**ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ,**
**ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ.**
**– ಬಸವಣ್ಣ**

ನಮ್ಮವರು ನಮ್ಮನ್ನು ಪ್ರೀತಿಯಿಂದ ಬಂದು ಸೇರಿದರೆ, ನಮ್ಮ ಯೋಗಕ್ಷೇಮವನ್ನುವಿಚಾರಿಸಿದರೆ,ಅದೇಒಳ್ಳೆಯಸಮಯವಾಗಿರುತ್ತದೆ. ಆವಾಗಲೇ ರಾಶಿಗಳು ಕೂಡಿವೆ, ನಮ್ಮ ಋಣ ಸಂಬಂಧಗಳು ಇವೆ ಎಂದುಕೊಳ್ಳಬೇಕು. ಪಂಚಾಂಗವನ್ನು ನೋಡಿ ಲೆಕ್ಕ ಹಾಕಿ ಋಣ ಸಂಬಂಧಗಳು, ರಾಶಿ ಕೂಡುವುದನ್ನು ನೋಡಿ ಹೇಳುವುದಲ್ಲ, ಒಳ್ಳೆಯ ಕಾರ್ಯ ಮಾಡುವವರಿಗೆ ಚಂದ್ರನ ಬಲವು, ನಕ್ಷತ್ರಗಳ ಬಲವು ಇರುತ್ತದೆ. ಮನುಷ್ಯನಿಗೆ ನೀತಿಯೇ ಬಲವಾಗಿರುತ್ತದೆ. ಸೂರ್ಯ, ಶನಿ, ಶುಕ್ರ, ರಾವು, ಕೇತು, ಚಂದ್ರ, ನಕ್ಷತ್ರಗಳು ಯಾವ ತೊಂದರೆಯನ್ನು ಕೊಡುವುದಿಲ್ಲ. ಯಾವ ದೋಷವನ್ನು ತಂದಿಕ್ಕುವುದಿಲ್ಲ. ಇಂದು ಒಳ್ಳೆಯದಲ್ಲ, ನಾಳೆ ಒಳ್ಳೆಯದು ಎಂದುಕೊಳ್ಳಬಾರದು, ನಾವು ಈಗ ಬದುಕುತ್ತಿರುವ ಸಮಯವೇ ಒಳ್ಳೆಯದು. ನಮ್ಮ ಕೆಲಸಕ್ಕೆ ಇದೇ ಸಮಯ ಸೂಕ್ತವಾದುದು, ಯಾವ ದಿನವು ಕೆಟ್ಟದ್ದಾಗಿರುವುದಿಲ್ಲ. ಯಾವ ಕಾಲ, ಸಮಯ ಕೆಟ್ಟದ್ದಲ್ಲ ಎಂದು ತಿಳಿದು ಬದುಕಬೇಕು. ಮೂಢನಂಬಿಕೆಗಳನ್ನು ಬಿಟ್ಟು ಅರಿವಿನ ಶಿವನನ್ನು ಆರಾಧಿಸಿದರೆ ಒಳ್ಳೆಯ ಫಲ ಸದಾ ನಮಗಿರುತ್ತದೆ ಎನ್ನುತ್ತಾನೆ ಬಸವಣ್ಣ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

# ಜೀವನದ ಮೌಲ್ಯ ಏನು?



■ ದೀಪಶ್ರೀ ಎಸ್ ಕೂಡ್ಲಿಗಿ

ಒಮ್ಮೆ ಶ್ರೀಮಂತನ ಮಗನಿಗೆ ತನ್ನ ಜೀವನದ ಮೌಲ್ಯ ಏನು? ಎಂದು ತಿಳಿದುಕೊಳ್ಳುವ ಬಯಕೆ ಹುಟ್ಟಿ, ಈ ಕುರಿತು ತಂದೆಯಲ್ಲಿ ವಿಚಾರಿಸಿದ. ತಂದೆ ಹೇಳಿದ" ನೀನು ನಿನ್ನ ಜೀವನದ ಮೌಲ್ಯ ಎಂಥದ್ದು ಎಂದು ತಿಳಿಯಲು ಇಚ್ಚಿಸಿದರೆ ತೆಗೆದುಕೋ ಈ ಕಲ್ಲನ್ನು ಹಿಡಿದು ಸಂತೆಗೆ ತೆರಳು. ಸಂತೆಯಲ್ಲಿ ಯಾರಾದರೂ ಈ ಕಲ್ಲಿನ ಬೆಲೆ ಕೇಳಿದರೆ, ನೀನು ಮೌನವಾಗಿ ನಿನ್ನ ಎರಡು ಬೆರಳುಗಳನ್ನು ಮಾತ್ರ ತೋರಿಸು" ಎಂದ.ತಂದೆ ಮಾತಿನಂತೆ ಕಲ್ಲನ್ನು ಹಿಡಿದು ಸಂತೆಗೆ ಹೊರಟ ಮಗ.

ಸಂತೆಯಲ್ಲಿ ಕಲ್ಲು ಹಿಡಿದು ನಿಂತ. ಬಳಿಕ ವ್ಯಕ್ತಿಯೊಬ್ಬ ಹುಡುಗನಲ್ಲಿ ಕಲ್ಲಿನ ಬೆಲೆ ಕೇಳಿದಾಗ, ಮರು ಮಾತನಾಡದೆ ಎರಡು ಬೆರಳುಗಳನ್ನು ತೋರಿಸಿದ.ವ್ಯಕ್ತಿ "ಎರಡು ನೂರು ರೂಪಾಯಿನ.ಈ ಕಲ್ಲು ತನಗೆ ಬೇಕೆಂದ". ಸಾಧಾರಣ ಕಲ್ಲಿನ ಬೆಲೆ ಎರಡು ನೂರು ರೂಪಾಯಿಯ. ಕುತೂಹಲ ತಡೆಯದೆ ,ವ್ಯಕ್ತಿಗೆ ಉತ್ತರ ನೀಡದೆ ತಂದೆಯ ಬಳಿಗೆ ಓಡಿ ಬಂದ ಮಗ ನಡೆದ ಘಟನೆಯನ್ನೆಲ್ಲ ವಿವರಿಸಿದ.

ಅದಕ್ಕೆ ತಂದೆ" ಈಗ ಈ ಕಲ್ಲನ್ನು ನೀನು ವಸ್ತು ಸಂಗ್ರಹಾಲಯಕ್ಕೆ ತೆಗೆದುಕೊಂಡು ಹೋಗು. ಅಲ್ಲಿ ಯಾರಾದರೂ ಕಲ್ಲಿನ ಬೆಲೆ ಕೇಳಿದರೆ ಆಗಲು ಕೂಡ ಎರಡು ಬೆರಳುಗಳನ್ನು ತೋರಿಸು" ಎಂದ.ವಸ್ತು ಸಂಗ್ರಹಾಲಯಕ್ಕೆ ಬಂದಿದ್ದ ವ್ಯಕ್ತಿಗೆ ಹುಡುಗನ ಕೈಯಲ್ಲಿದ್ದ ಕಲ್ಲು ಕಾಣಿಸಿತು ವ್ಯಕ್ತಿ, ಹುಡುಗನಲ್ಲಿ ಕಲ್ಲಿನ ಬೆಲೆ ಕೇಳಿದ ಹುಡುಗ ಪುನಃ ಎರಡು ಬೆರಳುಗಳನ್ನು ತೋರಿದ. ವ್ಯಕ್ತಿ ಕೇವಲ ಇಪ್ಪತ್ತು ರೂಪಾಯಿಯ. ಈ ಕಲ್ಲನ್ನು ನನಗೆ ಕೊಡು "ಎಂದ.ಕೂಡಲೇ ತನ್ನಪ್ಪನಿಗೆ ತಿಳಿಸಿದ.

ತಂದೆ ಕೊನೆಯದಾಗಿ "ಈಗ ಕಲ್ಲನ್ನು ಬೆಲೆಬಾಳುವ ಕಲ್ಲುಗಳನ್ನು ಮಾರುವ ಅಂಗಡಿಗೆ ತೆಗೆದುಕೊಂಡು ಹೋಗು, ಅಲ್ಲಿಯೂ ಸಹ ಕಲ್ಲಿನ ಬೆಲೆ ಕೇಳಿದರೆ ಎರಡು ಬೆರಳುಗಳನ್ನು ತೋರಿಸು" ಎಂದ. ಹುಡುಗ ಅಂಗಡಿಗೆ ತೆರಳಿ ತಂದೆಯ ಮಾತನ್ನು ಪುನರಾವರ್ತಿಸಿದ. ಮಾಲೀಕ ಕಲ್ಲನ್ನು ಕಂಡು" ಈ ಆಕರ್ಷಕ ಕಲ್ಲನ್ನು ಹಲವು ದಿನಗಳಿಂದ ಹುಡುಕುತ್ತಿದ್ದೇನೆ. ಇದರ ಬೆಲೆ ಏನೆಂದು "ಕೇಳಲಾಗಿ ಹುಡುಗ ಎರಡು ಬೆರಳುಗಳನ್ನು ತೋರಿದ. ಮಾಲೀಕನೆಂದ" ಹಂ ಎರಡು ಲಕ್ಷ ರೂಪಾಯಿಯ ನನಗೆ ಈ ಕಲ್ಲನ್ನು ಕೊಡು" ಎಂದ.ಹುಡುಗನಿಗೆ ಆಶ್ಚರ್ಯ!! ಸಂತೋಷ ತಡೆಯಲಾಗದೆ ಏದುಸಿರು ಬಿಡುತ್ತಾ ತಂದೆಯಲ್ಲಿಗೆ ಬಂದ ."ಈ ಕಲ್ಲನ್ನು ಮಾಲೀಕನೊಬ್ಬ ಎರಡು ಲಕ್ಷ ರೂಪಾಯಿಗೆ ಕೇಳಿದ್ದಾನೆ.ನನಗೆ ಮಾರಲು ಯಾವುದೇ ಹಿಂಜರಿಕೆ ಇಲ್ಲ" ಎಂದ. ಮಗನಿಗೆ ಜೀವನದ ಮೌಲ್ಯ ತಿಳಿಯಿತು.

ಈ ಕಲ್ಲಿನಂತೆ ನಾವು .ಕಲ್ಲಿಗೆ ಪ್ರತಿಯೊಬ್ಬರೂ ಒಂದೊಂದು ಬೆಲೆ ಕಟ್ಟಿದಂತೆ ,ನಮ್ಮನ್ನು ಕಂಡು ಒಬ್ಬೊಬ್ಬರು ವಿಭಿನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕೆಲವರು ಹಾಡಿ ಹೊಗಳಿದರೆ, ಇನ್ನು ಕೆಲವರು ತೆಗಳುತ್ತಾರೆ. ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ ಮುನ್ನಡೆಯುವುದೇ ಜೀವನ.ಹೀಗಾಗಿ ಜೀವನದಲ್ಲಿ ಯಾರನ್ನು ಮೆಚ್ಚಿಸುವ ಗೋಜಿಗೆ ತಲುಪುವುದು ಬೇಡ. ದೇವರು ಹಾಗೂ ನಮ್ಮ ಆತ್ಮ ಮೆಚ್ಚುವಂತೆ ಬದುಕಿ ಬಾಳಿದರೆ ಸಾಕು. ಆತ್ಮವೇ ಆತ್ಮವಿಶ್ವಾಸದ ಆಸ್ತಿ,ದೈವದ ಮೇಲಿನ ನಂಬಿಕೆಯೇ ಸಾಧನೆಗೆ ಮುನ್ನಡೆ. ಇದುವೇ ಜೀವನದ ಮೌಲ್ಯ.

## ಬೆಳಕಿನ ಹಾದಿಗೆ ನೀವೂ ಬರೆಯಿರಿ

**ಹಂಪಿ ಟೈಮ್ಸ್ ಬೆಳಕಿನ ಹಾದಿ ವಿಶೇಷ ಕಾಲಂ ಆರಂಭಿಸಿದ್ದು, ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.**

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com M: 9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಮತ್ತೆ ಬರಬಾರದೇ ಆ ದಿನಗಳು

ಈ ಜೀವನ ಒಂದು ನಿರಂತರ ಪಯಣ. ಬದುಕಿನ ಈ ಪಯಣ ಏಕಮುಖಿಯಾಗಿದ್ದು ಹಿಂದಿರುಗಿ ಹೋಗುವ ಪ್ರಶ್ನೆಯೇ ಇಲ್ಲ.. ಮುಂದೆ ಮುಂದೆ ಸಾಗುತ್ತಲೇ ಇರಬೇಕು. ಆದರೂ ಬದುಕಿನ ಕೆಲ ಸವಿ ಘಳಿಗೆಗಳ ನೆನಪಿನ ಬುತ್ತಿ ಕಟ್ಟಿಕೊಂಡು ಹೊರಡುವ ಈ ಪಯಣದಲ್ಲಿ ಬಾಲ್ಯ, ಯೌವ್ವನ, ವಿದ್ಯಾಭ್ಯಾಸ, ಉದ್ಯೋಗ, ಮದುವೆ, ಮಕ್ಕಳು, ಪಾಲನೆಯ ಜವಾಬ್ದಾರಿ, ಮಧ್ಯವಯಸ್ಸು ವೃದ್ಧಾಪ್ಯ ಹೀಗೆ ಹತ್ತು ಹಲವು ತಂಗುದಾಣಗಳಲ್ಲಿ ನಿಂತು ಜೊತೆಗೂಡುವ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಾ, ಪಯಣ ಮುಗಿಸಿದ ಜೊತೆಗಾರರನ್ನು ಬೀಳ್ಕೊಡುತ್ತ ಸಾಗುವುದೇ ಬದುಕು.



ಆದ್ದರಿಂದಲೇ ಡಿವಿ ಗುಂಡಪ್ಪನವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ
ಬದುಕು ಜಟಕಾ ಬಂಡಿ, ವಿಧಿ ಅದರ ಸಾಹೇಬ
ಕುದುರೆ ನೀನ್ ಅವನು ಪೇಳ್ದಂತೆ ಪಯಣಿಗರು
ಮದುವೆಗೂ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೇ ನೆಲವಿಹುದು ಮಂಕುತಿಮ್ಮ
ಎಂದು ಹೇಳಿದ್ದಾರೆ.

ಇದರ ತಾತ್ಪರ್ಯ ಬದುಕು ಎಂಬ ಜಟಕಾ ಬಂಡಿಯನ್ನು ಕವಿ ಹೇಳುವ ಸೊ ಕಾಲ್ಡ್ ವಿಧಿ ಇಲ್ಲವೇ ದೇವರು ನಡೆಸುತ್ತಾನೆ. ಮನುಷ್ಯ ಕೇವಲ ನಿಮಿತ್ತ ಮಾತ್ರವಾದ ಕುದುರೆಯಂತೆ. ಆ ವಿಧಿ ಹೇಳಿದಂತೆ ನಾವು ಬದುಕು ತೋರಿದತ್ತ ಸಾಗಬೇಕು, ಅದು ಸಂಭ್ರಮದ ಮದುವೆ ಮನೆಗಾದರೂ ಇರಬಹುದು, ಇಲ್ಲವೇ ಸಾವಿನ ಸೂತಕದ ಮನೆಗಾದರೂ ಇರಬಹುದು. ಪದ ಕುಸಿಯೇ ಅಂದರೆ ದೇಹವು ಕುಸಿದಾಗ(ಮರಣ ಹೊಂದಿದಾಗ) ಮತ್ತೆ ಭೂಮಿ ತಾಯಿಯ ಮಡಿಲು ನಮಗಾಗಿ ಇರುವುದು ಅಂದರೆ ಮರಳಿ ಮಣ್ಣಿಗೆ ಸೇರುತ್ತೇವೆ ಎಂದು.

ವಿಪರ್ಯಾಸವೆಂದರೆ ಬದುಕಿನ ಈ ಪಯಣದಲ್ಲಿ ಬಾಲ್ಯದಲ್ಲಿ ಯೌವನವನ್ನು, ಯೌವ್ವನದಲ್ಲಿ ಬಾಲ್ಯವನ್ನು, ಮಧ್ಯ ಮತ್ತು ಮುಪ್ಪಿನ ವಯಸ್ಸಿನಲ್ಲಿಯೂ ಹಿಂದಿನ ದಿನಗಳ ಕನವರಿಕೆಯಲ್ಲಿ ನಾವು ಬದುಕನ್ನು ಸವೆಸುತ್ತೇವೆ. ಬಾಲ್ಯದ ಆಟ ಪಾಠಗಳು ಸ್ನೇಹಿತರ ಒಡನಾಟಗಳು ಸಣ್ಣಪುಟ್ಟ ಹೊಡೆದಾಟಗಳು, ಹೈಸ್ಕೂಲಿಗೆ ಬರುವ ವೇಳೆಗಿನ ಬೆಚ್ಚಗಿನ ಪ್ರೀತಿಯ ಮೊದಲ ಪಾಠಗಳು, ಓದು, ಬರಹ ಪರೀಕ್ಷೆಗಳು, ರಜೆ ಬಂತೆಂದರೆ ಅಜ್ಜಿ ತಾತಂದಿರ ಬಳಿ, ಅತ್ತೆ ಮಾವಂದಿರ ಬಳಿ, ಸಂಬಂಧಿಕರ ಮನೆಗೆ ದೌಡು, ಕಡ್ಡಾಯ ನಿರಾತಂಕದ ರಜಾ ಸವಿಯುವ ಆ ದಿನಗಳು. ಹೊಳೆಯಲ್ಲಿ ಈಜು, ಮಾವಿನ ತೋಟ, ತೆಂಗಿನ ತೋಟ, ಹೊಲಗದ್ದೆಗಳಲ್ಲಿ ಓಡಾಟ. ಈ ಸಮಯದಲ್ಲಿ ಬರುವ ಜಾತ್ರೆಗಳಲ್ಲಿ ದೇವರ ದರ್ಶನದ ಜೊತೆ ಜೊತೆಗೆ ಬೇಕು ಬೇಕಾದ್ದು, ಬೇಡಿದ್ದು ಖರೀದಿಸುವ ಚಪಲ. ಸಣ್ಣ ಪುಟ್ಟ ಪ್ರವಾಸಗಳು. ಊರಿಗೆ ಮರಳಿ ಬರುವಾಗ ಕೊಡಿಸುವ ಹೊಸ ಬಟ್ಟೆಗಳು ಕೈಯಲ್ಲಿ ಇಡುವ ಐದು ಹತ್ತು ರೂಪಾಯಿಗಳು.. ಅಬ್ಬಾ ಅವು ಕೊಡುವ ಸಂತಸವನ್ನು ಇಂದಿನ ಲಕ್ಷಾಂತರ ದುಡಿಮೆಯೂ ಕೊಡಲಾರದು. ಅದೆಂತಹ ಕೇರ್ ಫ್ರೀ ದಿನಗಳು. ಬಾಲ್ಯದ ಒಡನಾಟ, ಹುಡುಗಾಟ, ಕಾದಾಟ ಇವೆಲ್ಲದರ ನಡುವೆಯೂ ಇದ್ದ ಸಮರಸದ ಬದುಕು ವರ್ಣನೆಗೆ ನಿಲುಕದ್ದು. ಮರಳಿ ಊರಿಗೆ ಒಲ್ಲದ ಮನಸ್ಸಿನಿಂದ ಪಯಣಿಸಿ ಮತ್ತೆ ಹೊಸ ತರಗತಿಗೆ ಸೇರಿ ಹೊಸ ಸ್ನೇಹಿತರ ಒಡನಾಟ, ಪಾಠ ಪ್ರವಚನಗಳತ್ತ ಚಿತ್ತ ಹೀಗೆ ಹತ್ತು ಹಲವು ನೆನಪುಗಳು ಮನದಲ್ಲಿ ಮನೆ ಮಾಡಿ ಕುಳಿತಿದ್ದು ನಮಗೆ ಹಿಂದಿನ ದಿನಗಳನ್ನು ಇನ್ನಿಲ್ಲದಂತೆ ನೆನಪಿಸುತ್ತ ಮನದ ಮೂಲೆಯ ಕದ ತೆರೆದು ಪಿಸುಗುಡುತ್ತವೆ.. ಮತ್ತೆ ಬರಬಾರದೆ ಆ ದಿನಗಳು ಎಂದು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಹೀಗೆಯೇ ಹೈಸ್ಕೂಲ್ ಮುಗಿಸಿ ಕಾಲೇಜ ಸೇರಿದಾಗ ಮತ್ತೆ ಹೊಸ ಸ್ನೇಹಿತರು ಸ್ನೇಹಿತೆಯರು, ಅಂತರ ಕಾಲೇಜು ಡಿಬೇಟುಗಳು ಕ್ರೀಡಾಕೂಟಗಳು ಚರ್ಚಾ ಸ್ಪರ್ಧೆಗಳು ಪಾಠದ ಜೊತೆಗೆ ಪಠ್ಯೇತರ ವಿಷಯಗಳು ಕಾಲೇಜಿನ ಮುಕುಟಮಣಿಯಾಗಿ ಸ್ನೇಹಿತರೊಂದಿಗೆ ಓಡಾಡುವ ಸಮಯ. ಬಾಲ್ಯದ ಸ್ನೇಹಿತರೇ ಕಾಲೇಜಿನಲ್ಲಿಯೂ ದೊರೆತರೆ ಅದೆಷ್ಟು ಮುದದ ದಿನಗಳು ನೋಡ ನೋಡುತ್ತಲೇ ವಿದ್ಯಾಭ್ಯಾಸ ಮುಗಿಸಿ ನೌಕರಿಗೆ ಅಲೆದಾಟ ಒಂದು ಉದ್ಯೋಗ ದೊರೆತು ಇನ್ನೇನು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುವ ಸಮಯದಲ್ಲಿಯೇ ಸೂಕ್ತ ಸಂಗಾತಿಯ ಹುಡುಕಾಟ ಮದುವೆಯಲ್ಲಿ ಪರ್ಯವಸಾನ ವಾಗುತ್ತದೆ. ಮುಂದೆ ಸಂಗಾತಿಯೊಂದಿಗೆ ಒಡನಾಟ, ಓಡಾಟ ಪ್ರೀತಿ ಹುಸಿಮುನಿಸು, ಸಣ್ಣಪುಟ್ಟ ಕಿತ್ತಾಟಗಳು ಮತ್ತೆ ಮಕ್ಕಳು, ಅವರ ಬಾಲ ಲೀಲೆಗಳು, ಸಣ್ಣಪುಟ್ಟ ಪ್ರವಾಸಗಳು, ಪಾರ್ಟಿಗಳು, ಉದ್ಯೋಗದಲ್ಲಿ ಪ್ರಗತಿ ಒಂದೇ ಎರಡೇ ಜೀವನದ ಹಲವು ಮೊದಲುಗಳನ್ನು ಈ ಹತ್ತು ವರ್ಷಗಳಲ್ಲಿ ತಲುಪುವ ಏಕೈಕ ಮಾರ್ಗ. ಯವ್ವನದ ದಿನಗಳಿಂದ ಹಿಡಿದು ಮಕ್ಕಳನ್ನು ಶಾಲೆಗೆ ಸೇರಿಸುವವರೆಗಿನ 20 ರಿಂದ 30ರ ವಯೋಮಾನದ ಈ ಹಂತ ಬದುಕಿನಲ್ಲಿ ಅತ್ಯಂತ ಮುದ ನೀಡುವ ಸಮಯವಾಗಿರುತ್ತದೆ. ಈ ಸಮಯದಲ್ಲಿ ಬಾಲ್ಯದ ಕನವರಿಕೆಗಳು ಇನ್ನೂ ಹೆಚ್ಚು. ನಮ್ಮ ತಂದೆ ತಾಯಿ ನಮ್ಮ ಮಕ್ಕಳ ಆಟ ಪಾಠಗಳನ್ನು ನೋಡುತ್ತಾ ಸಂತಸ ಪಡುತ್ತಲೇ ನಮ್ಮ ಬಾಲ್ಯದ ದಿನಗಳನ್ನು ನೆನೆಸಿ ಹೋಲಿಸುತ್ತಾ ಎಲ್ಲರೂ ಆನಂದದಲ್ಲಿ ಮುಳುಗೇಳುವ ಕಾಲ.... ಮುಂದಿನ ಜೀವನದ ಪಯಣದಲ್ಲಿ ಸುಂದರ ನೆನಪುಗಳನ್ನು ಉಳಿಸುವ ಈ ಕಾಲವನ್ನು ಕಂಡು ಮನ ಕನವರಿಸುತ್ತದೆ..... ಮತ್ತೆ ಬರಬಾರದೆ ಆ ದಿನಗಳು.

ಮೂವತ್ತರ ಸಮಯಕ್ಕೆ ಸಂಗಾತಿ, ಮಕ್ಕಳು ಎಂದು ಸೆಟಲ್ ಆಗುವ ಸಮಯಕ್ಕೆ ನನ್ನದೇ ಆದ ಪುಟ್ಟಗೂಡಿರಬೇಕೆಂಬ ಆಲೋಚನೆ ದಂಪತಿಗಳಲ್ಲಿ ಬಂದು ಚಿಕ್ಕ ಪುಟ್ಟ ಊರುಗಳಲ್ಲಿ ಸ್ವಂತದೊಂದು ಜಾಗವನ್ನು ಖರೀದಿಸಿ ಅದರಲ್ಲಿ ತಮಗಿಷ್ಟ ಬಂದಂತೆ ಮನೆ ಕಟ್ಟಿಸಿ, ದೊಡ್ಡ ದೊಡ್ಡ ಶಹರಗಳಲ್ಲಾದರೆ ತಮ್ಮ ಆರ್ಥಿಕ ಅನುಕೂಲಕ್ಕೆ ತಕ್ಕಂತೆ ಮನೆಯನ್ನು ಅಪಾರ್ಟ್ಮೆಂಟ್ಗಳಲ್ಲಿ ಖರೀದಿಸಿ ಗೃಹಪ್ರವೇಶ ಮಾಡಿ ಸಂತಸಪಡುತ್ತ, ಪ್ರತಿ ತಿಂಗಳು ಮನೆಯ ಕಂತನ್ನು ಕಟ್ಟುತ್ತಾ ಹೊಸ ಕಾರು, ಮಕ್ಕಳ ಹೊಸ ಹೊಸ ವಿಷಯಗಳ ಕಲಿಕೆಗೆ ಹಣ ಖರ್ಚು ಮಾಡುತ್ತಾ ಅಬ್ಬ! ಅದೆಷ್ಟು ದುಡಿದರೂ ಸಾಲದು ಇಂದಿನ ಕಾಲಕ್ಕೆ ಎಂದು ಹಲುಬುತ್ತಾ ಮುಂದಿನ ಹತ್ತರಿಂದ ಹದಿನೈದು ವರ್ಷಗಳನ್ನು ಕಳೆಯುತ್ತೇವೆ. ನಾವು ಚಿಕ್ಕವರಿದ್ದಾಗ ಕೂಡ ನಮ್ಮ ಅಪ್ಪ ಅಮ್ಮ ಅವರ ಮಧ್ಯ ವಯಸ್ಸಿನಲ್ಲಿ ಹೀಗೆಯೇ ಮನೆಯ ಖರ್ಚು ವೆಚ್ಚಗಳನ್ನು ತೂಗಿಸಿಕೊಂಡು ಹೋಗುವಲ್ಲಿ ಒದ್ದಾಡುತ್ತಿದ್ದ ನೆನಪುಗಳು ಬಂದು ಎಲ್ಲರ ಬಾಳಿನಲ್ಲಿಯೂ ಇದು ಸಹಜವಾದ ಪ್ರಕ್ರಿಯೆ ಎಂಬ ನಿರ್ಲಿಪ್ತತೆಯು ಮೈಗೂಡುತ್ತದೆ. ನೋಡ ನೋಡುತ್ತಲೇ ಮಕ್ಕಳು ಬೆಳೆದು ದೊಡ್ಡವರಾಗಿ ಶಾಲಾ ಹಂತವನ್ನು ದಾಟಿ ಕಾಲೇಜು ಕಲಿಕೆಗೆ ತಮ್ಮನ್ನು ತಾವು ತೊಡಗಿಸಿಕೊಂಡಾಗ ಮಕ್ಕಳ ಯೌವನದ ಸಮಸ್ಯೆಗಳಿಗೆ ನಮ್ಮ ಯೌವನದ ಜೀವನದ ಅನುಭವಗಳು ನೀಡಿದ ಪರಿಹಾರಗಳನ್ನು ಅವರಿಗೆ ಸೂಚಿಸುತ್ತಾ, ಅವರ ಮುಂದೆ ನಮ್ಮ ಹಳೆಯ ದಿನಗಳನ್ನು ನೆನಪಿಸಿಕೊಂಡು ಹೇಳತೊಡಗಿದರೆ ಮನಸ್ಸು ಮುದಗೊಂಡು ಹೇಳುತ್ತದೆ.... ಮತ್ತೆ ಬರಬಾರದೆ ಆ ದಿನಗಳು ಎಂದು.

ಮಧ್ಯ ವಯಸ್ಸು ನಿರಾಳವಾದ ಮನಸ್ಸು... ನೌಕರಿಯಲ್ಲಿ ಭದ್ರತೆ ಇದೆ, ಮನೆ ಕಟ್ಟಿಸಲು ಮಾಡಿದ ಸಾಲದ ಕೊನೆಯ ಕಂತು ತೀರಿದೆ, ಮಕ್ಕಳ ವಿದ್ಯಾಭ್ಯಾಸ ಮುಕ್ತಾಯದ ಹಂತದಲ್ಲಿದೆ. ಎಲ್ಲ ಜವಾಬ್ದಾರಿಗಳು ಒಂದೊಂದೇ ತೀರುತ್ತಿರುವಾಗ ಕೊಂಚ ಮನಸ್ಸು ನಿರಾಳತೆಯನ್ನು ಅನುಭವಿಸುತ್ತಿರುವುದರ ಸಂಕೇತವಾಗಿ ದೇಹ ಕೊಂಚ ಸ್ಥೂಲವಾದರೆ, ಕಣ್ಣಿಗೆ ಕನ್ನಡಕ, ತಲೆಯಲ್ಲಿ ಬೆಳ್ಳಿ ಕೂದಲು ಮುಖದಲ್ಲಿ ಕೊಂಚ ಮುದುರು, ದೇಹ ತುಸು ಕುಗ್ಗಿದಂತೆ ತೋರುತ್ತದೆ. ವೃದ್ಧಾಪ್ಯದ ಮೊದಲ ಮೆಟ್ಟಿಲು ಏರುತ್ತಿದ್ದು ನಿಧಾನವಾಗಿ ಒತ್ತಡ ಭರಿತ ಜೀವನದ ಫಲವೋ ಇಲ್ಲವೇ ವಯೋ ಸಹಜವಾದ ರಕ್ತದೊತ್ತಡ, ಮಧುಮೇಹ, ಥೈರಾಯಿಡ್ ನಂತಹ ಕಾಯಿಲೆಗಳು ತಮ್ಮ ಪ್ರತಾಪವನ್ನು ತೋರಲು ದೇಹವೆಂಬ ದೇಗುಲದ ಹೊಸ್ತಿಲಲ್ಲಿ ಹೊಂಚು ಹಾಕುತ್ತಿರುತ್ತವೆ. ಒಮ್ಮಿಂದೊಮ್ಮೆಲೆ ನಿಧಾನವಾಗುವ ನಡಿಗೆ, ಚಕ್ಕನೆ ಹಿಡಿದುಕೊಳ್ಳುವ ಮೊಣಕಾಲು, ಆಗಾಗ ಕಾಡುವ ಬೆನ್ನು ಮತ್ತು ಸೊಂಟ ನೋವುಗಳು ಇನ್ನು ಮೊದಲಿನಂತೆ ಓಡಾಡಲು ಸಾಧ್ಯವಿಲ್ಲ ಎಂದು ಇಶಾರೆ ಮಾಡಿ ನಗುತ್ತವೆ. ಆಗೆಲ್ಲ ಈ ಹಿಂದೆ ಬಾಲ್ಯದಲ್ಲಿ, ಯೌವ್ವನದಲ್ಲಿ ಓಡಾಡಿದ ಕುಣಿದಾಡಿದ ಎರಡೆರಡು ಮೆಟ್ಟಿಲು ಒಟ್ಟಿಗೆ ಏರಿದ, ನಾಲ್ಕು ನಾಲ್ಕು ಮೆಟ್ಟಿಲುಗಳನ್ನು ಹಾರಿ ಇಳಿದ ನೆನಪು ಮರುಕಳಿಸಿ ಮನ ಮತ್ತೆ ಮತ್ತೆ ಬಯಸುತ್ತದೆ.... ಮರಳಿ ಬರಬಾರದೇ ಆ ದಿನಗಳು ಎಂದು.

50ರ ನಂತರ ಮಕ್ಕಳ ಮದುವೆಯ ಸಂಭ್ರಮ, ಮೊಮ್ಮಕ್ಕಳನ್ನು ಎತ್ತಿ ಆಡಿಸುವ ಸಂತಸ, ಮೊಮ್ಮಕ್ಕಳೊಂದಿಗೆ ತಾವು ಮಕ್ಕಳಂತೆ ಆಡಿ ನಲಿದಾಡುವ, ಅವರ ಆಟ ಪಾಠಗಳಲ್ಲಿ ಜೊತೆಯಾಗಿ ಆ ಮಕ್ಕಳ ಸಣ್ಣಪುಟ್ಟ ಕೆಲಸಗಳನ್ನು ನಿರ್ವಹಿಸುತ್ತಾ ರಿಟೈರ್ ಆಗುವ ಹೊತ್ತಿಗೆ ಸಂಜೆ ಸಂಗಾತಿಯೊಂದಿಗೆ ಒಂದು ವಾಕಿಂಗ್, ದೇವಸ್ಥಾನ, ಸ್ನೇಹಿತರೊಂದಿಗೆ ಹರಟೆ, ಪುರಾಣ, ಪ್ರವಚನಗಳಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳುವುದು. ಮಕ್ಕಳನ್ನು ಶಾಲೆಗೆ ಕಳಿಸುವುದು, ಕರೆತರುವುದು, ಮನೆಗೆ ತರಕಾರಿ ತಂದು ಕೊಡುವುದು ಮುಂತಾದ ಕೆಲಸಗಳು ಗಂಡಸರ ಪಾಲಿಗೆ, ಹೆಣ್ಣು ಮಕ್ಕಳಾದರೆ ಅಡುಗೆ ಮನೆಯಲ್ಲಿ ಸೊಸೆಗೆ ಸಹಾಯ ಮಾಡುವುದು ಮೊಮ್ಮಕ್ಕಳ ಪಾಲನೆಯಲ್ಲಿ ಸೊಸೆಗೆ ಜೊತೆಗೂಡುವುದು, ಪುಟ್ಟ ಕೈದಾಟ ಮಾಡಿಕೊಂಡು ಹೂವು ಮತ್ತು ತರಕಾರಿಯ ಗಿಡಗಳನ್ನು ಬೆಳೆಸುವುದು, ಹಾಡು, ಹಸೆ, ಪೂಜೆ ಪುನಸ್ಕಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು ಹೀಗೆ ಹತ್ತು ಹಲವು ಕೆಲಸಗಳನ್ನು ನಿರ್ವಹಿಸುತ್ತಾ ಸಂಜೆಯಾದರೆ ನೀಟಾಗಿ ತಲೆ ಬಾಚಿ ಮುಖ ತೊಳೆದು ಕೊಂಚ ಕ್ರೀಮ್ ಹಚ್ಚಿ ಪೌಡರ್ ಹಾಕಿ ದೇವರಿಗೆ ದೀಪ ಮುಡಿಸಿ ಪತಿಯ ಬರುವಿಗಾಗಿ ಕಾಯುವುದು, ಬಂದೊಡನೆ ಚಹಾ ಕಾಫಿ ಮಾಡಿಕೊಡುತ್ತಾ ಅಂದಿನ ದಿನದ ಕುರಿತು ಮಾತನಾಡುವುದು. ಮತ್ತೆ ಮಕ್ಕಳು ಮೊಮ್ಮಕ್ಕಳ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ, ತಮ್ಮ ಮೊಮ್ಮಕ್ಕಳ ಮುಂದೆ ತಮ್ಮ ಮಕ್ಕಳು ಮಾಡುತ್ತಿದ್ದ ಬಾಲ್ಯದ ಚೇಷ್ಟೆಗಳನ್ನು, ಆಟ ಹುಡುಗಾಟಗಳನ್ನು ನೆನಪಿನ ಪದರಗಳಿಂದ ಹೊರತೆಗೆದು ಕಣ್ಣರಳಿಸಿ ಹೇಳುತ್ತಾ ಹೋದರೆ ಮತ್ತೆ ಮತ್ತೆ ಮನಸ್ಸಿಗೆ ಬರುವುದು ಒಂದೇ ....ಮರಳಿ ಬರಬಾರದೇ ಆ ದಿನಗಳು ಎಂದು.

ಸ್ನೇಹಿತರೆ, ಪ್ರತಿಯೊಬ್ಬರ ಜೀವನವೂ ವಿಶಿಷ್ಟ. ಈ ಸೃಷ್ಟಿಯ ಯಾವುದೇ ಒಂದು ಜೀವಿಯು ಯಕಶ್ಚಿತ್ ಅಲ್ಲ. ಅವರವರ ಜೀವನ ಅವರವರಿಗೆ ಮಹತ್ತರವಾದದ್ದು. ನಮ್ಮ ನಮ್ಮ ಜೀವನದ ಬಹುಮುಖ್ಯ ಆಗುಹೋಗುಗಳಿಗೆ ನಾವು ಮಾತ್ರ ಕಾರಣ. ಹುಟ್ಟಿನಿಂದ ಸಾಯುವವರೆಗೆ ನಮ್ಮೊಡನೆ ಇರುವುದು ನಾವು ಮಾಡಿದ ಕಾರ್ಯಗಳು, ಅವುಗಳ ಫಲಿತಾಂಶ ಮತ್ತು ಅವುಗಳ ನೆನಪುಗಳು. ಆ ನೆನಪುಗಳು ನಮ್ಮನ್ನು ಚೇತೋಹಾರಿ ಯಾಗಿಸುವಂತೆ ಬದುಕುವ ಜವಾಬ್ದಾರಿ ಮತ್ತು ಕರ್ತವ್ಯಗಳು ನಮ್ಮವು. ನಮ್ಮ ಹಿಂದಿನ ದಿನಗಳನ್ನು ನೆನೆದು ಸಂತಸಪಟ್ಟು ಮತ್ತೆ ಮರಳಿ ಆ ದಿನಗಳು ಬರಬಾರದೇ ಎಂದು ಆಶಿಸುವಂತಹ ಜೀವನ ನಮ್ಮೆಲ್ಲರದೂ ಆಗಿರಲಿ ಎಂಬ ಆಶಯದೊಂದಿಗೆ.

# ಊದಲು ತಿಂದವನಿಗೆ ಉಬ್ಬಸದ ಚಿಂತೆಯಿಲ್ಲ

## ಆರೋಗ್ಯ ಸಿರಿ

### ಸಿರಿಧಾನ್ಯದ ಊದಲು ಕಟ್ಲೇಟ್ ಮಾಡೋಣ ಬನ್ನಿ

**ನಮ್ಮ ದೇಹಕ್ಕೆ ಆರೋಗ್ಯವಾದ ಪದಾರ್ಥಗಳು ಬಲು ಮುಖ್ಯ ಆಗಿವೆ. ಸಿರಿಧಾನ್ಯಗಳಲ್ಲಿ ಊದಲು ಕೂಡ ಒಂದು ವಿಧದ ಸಿರಿಧಾನ್ಯ. ಇದರಿಂದ ನಾವು ಮಧುಮೇಹ,ಮೈ ಗ್ರೇನ್,ಪಿತ್ತಕೋಶದ ಕಲ್ಲುಗಳ ನಿವಾರಣೆ, ಕಬ್ಬಿಣಾಂಶ, ಲುಸಿನ್,ಪೊಟ್ಯಾಶಿಯಂ, ವಿಟಮಿನ್,ಮಿನರಲ್, ಅಲರ್ಜಿನ್ ರಹಿತ,ಫೈಬರ್ ಗ್ಲುಟೆನ್ ಮುಕ್ತ ಹೊಂದಿದ್ದು ನೈಸರ್ಗಿಕವಾದ ಪೋಷಕಾಂಶ ನಮ್ಮ ದೇಹಕ್ಕೆ ಒದಗಿಸುವುದು.ಗರ್ಭಿಣಿ ಸ್ತ್ರೀಯರಿಗೆ ಬಾಣಂತಿಯರಿಗೆ ಬಲು ಉಪಯುಕ್ತ ಆಗಿದೆ. "ಊದಲು ತಿಂದವನಿಗೆ ಉಬ್ಬಸದ ಚಿಂತೆಯಿಲ್ಲ" ಎಂಬ ಮಾತಿದೆ. ಆರೋಗ್ಯದ ಸಂಪತ್ತಿನ ನಿಧಿಯನ್ನು ಹೊತ್ತು ಕೊಡುವ ಸಿರಿಧಾನ್ಯ ಇದಾಗಿದ್ದು ನಮ್ಮ ಅದೃಷ್ಟ ಅಂತಲೇ ಹೇಳಬಹುದು. ಕ್ಯಾಲ್ಸಿಯಂ ಕೊರತೆ ನೀಗಿಸುವ ಊದಲು ಸಿರಿಧಾನ್ಯದಿಂದ ಎಲ್ಲರಿಗೂ ಇಷ್ಟ ಆಗುವ ಪದಾರ್ಥ ಅಂದರೆ "ಊದಲು ಕಟ್ಲೇಟ್"**

### ಊದಲು ಕಟ್ಲೇಟ್ ಮಾಡಲು ಬೇಕಾದ ಪದಾರ್ಥಗಳು

ಊದಲು 1 ಕಪ್
ಕಾಬೂಲ್ 1/2 ಅರ್ದ ಕಪ್
ಕ್ಯಾರೆಟ್ 1 ಸಣ್ಣಗೆ ಕಟ್ ಮಾಡಿದ್ದು
ಈರುಳ್ಳಿ 1 ಸಣ್ಣಗೆ ಕಟ್ ಮಾಡಿದ್ದು
ಕ್ಯಾಪ್ಸಿಕಂ(ದೊಡ್ಡ ಮೆಣಸಿನಕಾಯಿ) 1 ಸಣ್ಣಗೆ ಕಟ್ ಮಾಡಿದ್ದು
ಸ್ವೀಟ್ ಕಾರ್ನ್ ಕಾಲ್ ಬಟ್ಟಲು
ಉಪ್ಪು ರುಚಿಗೆ ತಕ್ಕಷ್ಟು
ಮೆಣಸಿನ 1 ಚಮಚ
ಧನಿಯಾ ಪುಡಿ 1 ಚಮಚ
ಗರಂ ಮಸಾಲ 1/2 ಚಮಚ
ಕೊತ್ತಂಬರಿಸೊಪ್ಪು ಕಾಲ್ ಬಟ್ಟಲು ಸಣ್ಣಗೆ ಕಟ್ ಮಾಡಿದ್ದು
ಹಸಿಮೆಣಸಿನಕಾಯಿ 2 ಸಣ್ಣಗೆ ಕಟ್ ಮಾಡಿದ್ದು
ಜಿಂಜರ್ ಗಾರ್ಲಿಕ್ ಪೇಸ್ಟ್ 1 ಚಮಚ
ಶಾವಿಗೆ 1/4 ಬಟ್ಟಲು

### ಊದಲು ಕಟ್ಲೇಟ್ ಮಾಡುವ ವಿಧಾನ

ಮೊದಲು ಅರ್ಧ ಬಟ್ಟಲು ಕಾಬೂಲ್ ತೆಗೆದುಕೊಂಡು ನೆನೆಯಲು ಇಡಿ. ಮಿನಿಮಮ್ 6 ತಾಸು ನೆನೆಯಬೇಕು. ನಂತರ ಊದಲು ಅರ್ದ ಬಟ್ಟಲು ತೆಗೆದುಕೊಳ್ಳಿ ಚೆನ್ನಾಗಿ ಎರಡು ಮೂರು ಬಾರಿ ನೀರಿನಿಂದ ತೊಳೆಯಿರಿ.
ಈಗ, ಒಂದು ಪಾತ್ರೆಯಲ್ಲಿ ಒಂದು ಬಟ್ಟಲು ನೀರು ತೆಗೆದುಕೊಂಡು ಕುದಿಯಲು ಇಡಿ ಅದಕ್ಕೆ ಅರ್ದ ಸ್ಪೂನ್ ಉಪ್ಪು ಹಾಕಿರಿ ನೀರು ಬಬಲ್ಸ್ ಬಂದ ಮೇಲೆ ಗುಳ್ಳೆ ಗುಳ್ಳೆ ಬರುತ್ತಿರುವಾಗ ತೊಳೆದುಕೊಂಡ ಊದಲು ಪಾತ್ರೆಗೆ ಹಾಕಿ ಮುಚ್ಚಳ ಮುಚ್ಚಿ.
ಲೋ ಫ್ಲೇಮ್ ಅಲ್ಲಿ ಇಟ್ಟು 10 ನಿಮಿಷ ಬಿಡಿ.ಸಣ್ಣ ಉರಿಯಲ್ಲಿ ಇಟ್ಟು ಊದಲು ಅನ್ನ ಮಾಡಿಕೊಳ್ಳಿ ಮದ್ಯ ಸ್ವಲ್ಪ ಸೌಟಿನ ಸಹಾಯದಿಂದ ಬಾಡಿಸಿ. ಅಕ್ಕಿಯ ಅನ್ನ ಮಾಡಿದ ಹಾಗೆ ಮಾಡಿಕೊಳ್ಳಿ ಈಗ ಊದಲು ಅನ್ನ 10 ನಿಮಿಷದಲ್ಲಿ ರೆಡಿ ಆಯ್ತು ಇದನ್ನು ತಣ್ಣಗೆ ಆಗಲು ಬಿಡಿ.
ಈಗ ಕ್ಯಾರೆಟ್, ಕ್ಯಾಪ್ಸಿಕಂ, ಈರುಳ್ಳಿ, ಕೊತ್ತಂಬರಿಸೊಪ್ಪು, ಹಸಿ ಮೆಣಸಿನಕಾಯಿ ಚೆನ್ನಾಗಿ ತೊಳೆದು ಸಣ್ಣಗೆ ಕಟ್ ಮಾಡಿಕೊಳ್ಳಿ.
ಕಾಬೂಲ್ ಕುಕ್ಕರಿನಲ್ಲಿ ಕುದಿಸಿಕೊಳ್ಳಿ. ತಣ್ಣಗೆ ಆದ ಮೇಲೆ ನೀರು ಹಾಕದೆ ನುಣ್ಣಗೆ ಮಿಕ್ಸಿ ಮಾಡಿಕೊಳ್ಳಿ.
ಈಗ ಒಂದು ಅಗಲವಾದ ಪಾತ್ರೆಗೆ ಊದಲು ಅನ್ನ,ನುಣ್ಣಗೆ ರುಬ್ಬಿಕೊಂಡು ಕಾಬೂಲ್ ಮಿಶ್ರಣ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ.
ಅದಕ್ಕೆ ರುಚಿಗೆ ಉಪ್ಪು, ಕ್ಯಾರೆಟ್, ಕ್ಯಾಪ್ಸಿಕಂ, ಈರುಳ್ಳಿ,ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು,ಸ್ವೀಟ್ ಕಾರ್ನ್,ಒಂದು ಚಮಚ ಮೆಣಸಿನಪುಡಿ, ಕಾಲ್ ಟೀ ಸ್ಪೂನ್ ಅರಿಶಿಣಪುಡಿ,ಒಂದು ಚಮಚ ಧನಿಯಾ ಪುಡಿ,ಅರ್ಧ ಚಮಚ ಗರಂ ಮಸಾಲ,ಒಂದು ಸ್ಪೂನ್ ಜಿಂಜರ್ ಗಾರ್ಲಿಕ ಪೇಸ್ಟ್ ಇವೆಲ್ಲವನ್ನೂ ಚೆನ್ನಾಗಿ ಮಿಕ್ಸ್ ಮಾಡಿರಿ. ಈಗ,ಊದಲು ಕಟ್ಲೆಟ್



ಮಿಶ್ರಣ ತಯಾರಿ ಆಯ್ತು.
ಈಗ ಒಂದು ತವಾ ತೆಗೆದುಕೊಂಡು ಕಾಯಲು ಬಿಡಿ ಕಾದ ನಂತರ ಮಿಶ್ರಣವನ್ನು ತೆಗೆದುಕೊಂಡು ನಿಮಗೆ ಬೇಕಾದ ಆಕಾರದಲ್ಲಿ ಮಾಡಿಕೊಂಡು ಮೇಲೆ ಶಾವಿಗೆ ಉದುರಿಸಿ ಸ್ವಲ್ಪ ಲೈಟ್ ಆಗಿ ಒತ್ತಿ ಶಾಲೋವ ಫ್ರೈ ಮಾಡಿಕೊಳ್ಳಿ.
ಆರೋಗ್ಯವಂತ ರುಚಿಕರ "ಊದಲು ಕಟ್ಲೇಟ್"ಮಾಡಿಕೊಂಡು ಎಲ್ಲರೂ ಸವಿಯಿರಿ.



ರಮ್ಯ ಸಂತೋಷ ವಡೆ
ಹೊಸಪೇಟೆ

# ಶಾಲಾ ಪೂರ್ವ ಶಿಕ್ಷಣಕ್ಕೆ ಬಾಲ ಮೇಳ ಬಲವರ್ಧನೆ

## ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರಣಂ ಹೇಳಿಕೆ । ಅಂಗನವಾಡಿ ಶಿಕ್ಷಕಿಯರ ಶ್ರಮ ಅನನ್ಯ

■ ಹಂಪಿ ಟೈಮ್ಸ್ ಕೊಟ್ಟೂರು

ಶಾಲಾ ಪೂರ್ವ ಶಿಕ್ಷಣ ಹಂತದ, ಮಕ್ಕಳ ಶೈಕ್ಷಣಿಕ ಬಲವರ್ಧನೆಗೆ 'ಬಾಲ ಮೇಳ ಕಾರ್ಯಕ್ರಮಗಳು" ಮೊದಲು ಬೆರಳೆಣಿಕೆಯಷ್ಟು ತಾಲೂಕು ಕೇಂದ್ರದಲ್ಲಿ ಮಾತ್ರ ನಡೆಯುತ್ತಿದ್ದವು, ಪ್ರಸ್ತುತ ಪ್ರತಿ ಗ್ರಾಪಂ ಕೇಂದ್ರ ಸ್ಥಾನದಲ್ಲಿ, ಮಹತ್ವವಾದ ಈ ಕಾರ್ಯಕ್ರಮ"ವನ್ನು ಆಯೋಜಿಸಿರುವುದು ಶ್ಲಾಘನೀಯ ಎಂದು ಕೂಡ್ಲಿಗಿ-ಕೊಟ್ಟೂರು ಉಭಯ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರಣಂ ಪ್ರಶಂಸೆ ವ್ಯಕ್ತಪಡಿಸಿದರು.



ತಾಲೂಕಿನ ಚಪ್ಪರದಹಳ್ಳಿ ಗ್ರಾಮದಲ್ಲಿ ಸೋಮವಾರ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ,ಕಲಬುರಗಿ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಯನಗರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಜಯನಗರ ಹಾಗೂ ಕಲಿಕೆ ಟಾ ಟಾ ಟ್ರಸ್ಟ್ ಬೆಂಗಳೂರು ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಶಾಲಾ ಪೂರ್ವ ಶಿಕ್ಷಣ ಬಲವರ್ಧನಾ ಕಾರ್ಯಕ್ರಮದಡಿ ಬಾಲ ಮೇಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾನ್ವೆಂಟ್ ಶಿಕ್ಷಣ ಹಿಂದಿಕ್ಕುವ ನಿಟ್ಟಿನಲ್ಲಿ, ಹೆಚ್ಚು ಕ್ರಿಯಾಶೀಲತೆ ಮತ್ತು ವಿನೂತನ ಚಟುವಟಿಕೆಗಳ ಮೂಲಕ ಶಾಲಾ ಪೂರ್ವ ಶಿಕ್ಷಣ ಬಲವರ್ಧನೆಗೊಳಿಸುವಲ್ಲಿ ಅಂಗನವಾಡಿ ಶಿಕ್ಷಕಿಯರ ಪಾತ್ರ ದೊಡ್ಡದು ಹಾಗೂ ಶಾಲಾ ಹಂತದ ಶಿಕ್ಷಣಕ್ಕೆ ಇವರು ಬಿಲ್ಡರ್‌ಗಳು, ಇವರ ಶ್ರಮ ಅನನ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕು ಪಂಚಾಯತಿ ಇಒ ವೈ.ರವಿಕುಮಾರ್ ಮಾತನಾಡಿ, ತಾಲ್ಲೂಕಿನ ಎಲ್ಲಾ ಅಂಗನವಾಡಿ ಕೇಂದ್ರಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಆಟದ ಸಾಮಾಗ್ರಿಗಳನ್ನು ನೀಡಲಾಗುವುದು ಇದರ ಸದುಪಯೋಗ ಪಡಿದುಕೊಂಡು ಮಕ್ಕಳನ್ನು ಉತ್ತಮ ಆರೋಗ್ಯದೊಂದಿಗೆ, ಸಧೃಡವಂತರಾಗಿ ಆರೈಕೆ ಮಾಡಿ ಎಂದರು.

ಮಹಿಳಾ ಮತ್ತು ಮಕ್ಕಳ ಅಭೀವೃದ್ಧಿ ಇಲಾಖೆ ಉಪ ನಿರ್ದೇಶಕರು ಎಸ್.ಶ್ವೇತಾ ಮಾತನಾಡಿ ಶಾಲೆಗಳಲ್ಲಿ ಪ್ರತಿಭಾ ಕಾರಂಜಿ, ಸರಸ್ವತಿ ಪೂಜೆ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ ಅದೇ ಮಾದರಿಯಲ್ಲಿ ಶಾಲಾ ಪೂರ್ವ ಶಿಕ್ಷಣ ಹಂತದಲ್ಲಿ ನಡಿಬೇಕು ಎನ್ನುವ ಚಿಂತನೆ ನಮ್ಮ ಅಂಗನವಾಡಿ ಶಿಕ್ಷಕಿಯರಲ್ಲಿತ್ತು, ಅದು ಈಗ ಬಾಲ ಮೇಳದ ಮೂಲಕ ನನಸಾಗಿದೆ ಎಂದರು.

ಅಂಗನವಾಡಿ ಶಾಲೆಯ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಮಹಾನ್ ವ್ಯಕ್ತಿಗಳ ವೇಷಭೂಷಣ ಪ್ರದರ್ಶನ ನೀಡಿದರು,.

ಶಾಲಾ ಪೂರ್ವ ಶಿಕ್ಷಣ ಕಲಿಕಾ ಚಟುವಟಿಕೆಗಳ ವಸ್ತು ಪ್ರದರ್ಶನ ಹಾಗೂ ಗರ್ಭಿಣಿಯರು, 3 ತಿಂಗಳು, 6 ತಿಂಗಳು ಹಾಗೂ ಒಂದು, ಒಂದವರೆ , ಮೂರು ವರ್ಷದ ಮಕ್ಕಳ ಆಹಾರ ವಿಧಾನಗಳ ಪ್ರದರ್ಶನವನ್ನು ಪೋಷಕರನ್ನು ಆಕರ್ಷಿಸುವಂತೆ ಆಯೋಜಿಸಲಾಗಿತ್ತು. ಎ.ವೈ ಕೊಟ್ರೇಶ್ ಕಲಿಕಾ ಟಾಟಾ ಟ್ರಸ್ಟ್ ಜಿಲ್ಲಾ ವ್ಯವಸ್ಥಾಪಕರು ಪ್ರಾಸ್ತವಿಕವಾಗಿ ಮಾತನಾಡಿದರು. ಹೇಮಕ್ಷಿ ರೇಣುಕಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸುಭದ್ರಾ ದೇವಿ ಜಿಲ್ಲಾ ನಿರೂಪಾಣಧೀಕಾರಿಗಳು ಮಹಿಳಾ ಮತ್ತು ಮಕ್ಕಳ ಅಭೀವೃದ್ಧಿ ಇಲಾಖೆ ವಿಜಯನಗರ, ನಿಂಗಪ್ಪ ಇ ಸಿ ಒ ಶಿಕ್ಷಣ ಇಲಾಖೆ, ರಾಘವೇಂದ್ರ ಹಣಜಿ ಪಿಡಿಓ ಗ್ರಾ .ಪಂ ಐಯ್ಯನಹಳ್ಳಿ, ಕೆ ಕೊಟ್ರೇಶ್ ಗ್ರಾಮ ಪಂಚಾಯ್ತಿ ಸದಸ್ಯರು, ಸುಮಾ, ಅನೀತಾ ಕುಮಾರಿ, ಓಬಳೇಶ್, ನಂದೀಶ್ ವರ್ತಕ, ಟೋಕರಾಜಪ್ಪ, ಮಹೇಶಪ್ಪ, ಸಿದ್ಧಲಿಂಗಪ್ಪ, ಅನ್ನಪೂರ್ಣ, ಇತರರು ವೇದಿಕೆಯಲ್ಲಿದ್ದರು.

ಹಿರಿಯ ಮೇಲ್ವಿಚಾರಕಿ ವಿಜಯಲಕ್ಷ್ಮೀ, ಅನ್ನಪೂರ್ಣ ನಿರ್ವಹಿಸಿದರು.

---

**ಕವಿ ಮನಸು**

## ಕಾಲ ಜ್ಞಾನ

ಓಡುತಿರುವ ಕಾಲವಾ ನಿಲಿಸಲಾರೆ
ಹಿಂದೆ ಓಡುತಾ ನೀ ತಲುಪಲಾರೆ
ಸಿಗದು ನೀ ಅಂದುಕೊಂಡ ಜೀವನ
ಇದುವೆ ಆ ದೇವರ ಕಾಲಜ್ಞಾನ

ಬಯಸಿದ ಬಯಕೆಗಳೆಲ್ಲ ನಿನಗಿಲ್ಲ
ಸಿಕ್ಕಿರುವುದು ಅನುಭವಿಸಲು ನೀನೊಲ್ಲ
ಮನುಜನೆ ಬಯಸದಿರು ಅಜ್ಞಾನ
ಅರಿತು ಬಾಳು ನೀ ಕಾಲಜ್ಞಾನ

– ಸುಜಾತ ಗಿಡ್ಡಪ್ಪಗೌಡ್ರ
ಹಂಪಿ.

---

## ಒಂದು ನಿಲ್ದಾಣ, ಒಂದು ಉತ್ಪನ್ನ" ಮಳಿಗೆ ಉದ್ಘಾಟನೆ ಮಾಡಿದ ಸಂಸದ ವೈ.ದೇವೇಂದ್ರಪ್ಪ

ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ರೈಲ್ವೇ ನಿಲ್ದಾಣದಲ್ಲಿ 'ಒಂದು ನಿಲ್ದಾಣ, ಒಂದು ಉತ್ಪನ್ನ' ಯೋಜನೆಯಡಿಯ ಸಂಡೂರು ಕರಕುಶಲ ಕೇಂದ್ರದ ಲಂಬಾಣಿ ಕಸೂತಿ ಕಲೆಯ ಉತ್ಪನ್ನಗಳ ಮಾರಾಟ ನೂತನ ಮಳಿಗೆಯನ್ನು ಸಂಸದ ವೈ. ದೇವೇಂದ್ರಪ್ಪ ಅವರು ಮಂಗಳವಾರ ಉದ್ಘಾಟನೆ ಮಾಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಬಿ.ಶ್ವೇತಾ, ಉಪ ಮೇಯರ್ ಬಿ.ಜಾನಕಿ, ಹಿರಿಯ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ ಆಂಜನೇಯಲು, ವಿಭಾಗೀಯ ವೈದ್ಯಕೀಯ ಅಧಿಕಾರಿ ಸುಸ್ಮಿತಾ ಜಗನ್ ಮೋಹನ್ ರೆಡ್ಡಿ, ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷರಾದ ಮಹಾರುದ್ರ ಗೌಡ, ಚೇಂಬರ್ ಆಫ್ ಕಾಮರ್ಸ್‌ನ ಸದಸ್ಯ ರಾಮಚಂದ್ರಯ್ಯ, ಬಳ್ಳಾರಿ ರೈಲ್ವೆ ನಿಲ್ದಾಣದ ವ್ಯವಸ್ಥಾಪಕ ನಾಗೇಶ್ ಬಾಬು ಶರ್ಮಾ, ಮುಖ್ಯ ವಾಣಿಜ್ಯ ನಿರೀಕ್ಷಕ ಎಸ್. ಹೊನ್ನೂರಸ್ವಾಮಿ ಸೇರಿದಂತೆ, ಮಹಾನಗರ ಪಾಲಿಕೆಯ ಸದಸ್ಯರು, ರೈಲ್ವೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

---

## ಮಾ.14, 15 ರಂದು ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ತಾಲ್ಲೂಕಿನ ಜೋಳದರಾಶಿ ಗ್ರಾಮೀಣ ಪ್ರದೇಶದಲ್ಲಿ 2 ಪ್ಯಾರಾ (ಸ್ಪೆಷಲ್ ಫೋರ್ಸ್‌ಸ್) (ಸೇನೆ ಪಡೆ) ಅವರು ಸುಮಾರು 10 ಸಾವಿರ ಅಡಿಯಿಂದ ಪ್ಯಾರಾಚೂಟ್‌ನಿಂದ ಹಾರುವ ತರಬೇತಿಯನ್ನು ಹಮ್ಮಿಕೊಂಡಿರುವುದರಿಂದ, ಸುತ್ತಮುತ್ತಲಿನ ಪ್ರದೇಶವನ್ನು ವಿದ್ಯುತ್ ಮುಕ್ತ ಪ್ರದೇಶವನ್ನಾಗಿ ಮಾಡಿಕೊಡಲು ಮನವಿ ಮಾಡಿದ್ದು ಮತ್ತು ಎಫ್-4 ಎಟಿಪಿಎಸ್ ಮಾರ್ಗದಲ್ಲಿ ಎಲ್.ಟಿ ವಾಹಕ ಬದಲಾವಣೆ ಕಾಮಗಾರಿ ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಮಾ.14 ಮತ್ತು 15 ರಂದು ಬೆಳಿಗ್ಗೆ 07 ಗಂಟೆಯಿಂದ ಸಂಜೆ 04 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮೋಹನಬಾಬು ತಿಳಿಸಿದ್ದಾರೆ.

110/11ಕೆ.ವಿ ಮೀನಹಳ್ಳಿ ಉಪ-ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಫ್-4 ಎಟಿಪಿಎಸ್ ಮಾರ್ಗ ಮತ್ತು ಎಫ್-5 ಹಗರಿ ಕೃಷಿ ಪಂಪ್‌ಸೆಟ್ ಮಾರ್ಗಗಳ ಪಿಡಿ ಹಳ್ಳಿ, ಲಿಂಗದೇವನಹಳ್ಳಿ, ವೈ.ಕಗ್ಗಲ್, ಯಾಳ್ಪಿ, ಜೋಳದರಾಶಿ, ಚೆಳ್ಳಗುರ್ಕಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

---

## ಹೆಣ್ಣು ಭ್ರೂಣಲಿಂಗ ಪತ್ತೆ: ಜೈಲು ಶಿಕ್ಷೆ ದಂಡ ವ್ಯಾಪಕ ಜಾಗೃತಿಯಾಗಲಿ

■ ಹಂಪಿ ಟೈಮ್ಸ್ ಬಳ್ಳಾರಿ

ಹೆಣ್ಣು ಮಗುವಿನ ಮಹತ್ವ ಎಲ್ಲರೂ ಅರಿಯಬೇಕು. ಹೆಣ್ಣು ಭ್ರೂಣಲಿಂಗ ಪತ್ತೆಯು ಕಾನೂನಿನ ಪ್ರಕಾರ ಅಪರಾಧವಾಗಿದ್ದು, ಉಲ್ಲಂಘಿಸಿದಲ್ಲಿ ಜೈಲು ಶಿಕ್ಷೆ ಮತ್ತು ದಂಡವಿದೆ. ಈ ಕುರಿತು ವ್ಯಾಪಕವಾಗಿ ಜಾಗೃತಿ ನೀಡಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್.ಎನ್.ಹೊಸಮನೆ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಮ್ಸ್ ಇವರ ಸಂಯುಕ್ತಾಶ್ರಯದಲ್ಲಿ ವೈದ್ಯಾಧಿಕಾರಿಗಳಿಗೆ, ಖಾಸಗಿ ಆಸ್ಪತ್ರೆಯ ಸ್ಕ್ಯಾನಿಂಗ್ ಕೇಂದ್ರಗಳ ತಜ್ಞರಿಗೆ ದತ್ತು ಕಾಯ್ದೆ-2022, ಮಮತೆಯ ತೊಟ್ಟಿಲು, ಪಿಸಿಪಿಎನ್‌ಡಿಟಿ-ಕಾಯ್ದೆ-1994 ಕಾಯ್ದೆಗಳ ಕುರಿತ ವಿಮ್ಸ್‌ನ ಬಿ.ಸಿ.ರಾಯ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ ಕುಟುಂಬದ ಜವಾಬ್ದಾರಿಯನ್ನು ತ್ಯಾಗದಿಂದ ನಿರ್ವಹಿಸುತ್ತಾಳೆ. ತಲೆ-ತಲಾಂತರದಿಂದ ಹೆಣ್ಣನ್ನು ಸಮಾಜದ ಮಗಳಾಗಿ ಕಾಣುತ್ತಿದ್ದು, ಈಗಲೂ ಸಹ ಅದೇ ಗೌರವದೊಂದಿಗೆ ಮತ್ತು ಹೆಮ್ಮೆಯೊಂದಿಗೆ ಸ್ವೀಕರಿಸಬೇಕು ಎಂದು ತಿಳಿಸಿದರು.

ಲಿಂಗಾನುಪಾತ ಸಮವಾಗಿರದಿದ್ದರೆ ಸಮಾಜದ ಸ್ವಾಸ್ಥ್ಯ ಹಾಳಾಗುವುದರ ಜೊತೆಗೆ, ಹೆಣ್ಣಿನ ಮೇಲೆ ದೌರ್ಜನ್ಯ ಉಂಟಾಗುವ ಸಾಧ್ಯತೆ ಇದೆ. ಭ್ರೂಣ ಹತ್ಯೆ ಮಾಡುವ ಸಾಧ್ಯತೆ ಇರುವುದರಿಂದ ಕಾಯ್ದೆಯ ಕಠಿಣತೆಯ ಜೊತೆಗೆ ಮಾನವೀಯತೆ ಕುರಿತು ಹೆಚ್ಚು ಜಾಗೃತಿ ನೀಡಬೇಕಿದೆ ಎಂದು ಅಭಿಪ್ರಾಯ ಪಟ್ಟರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಹೆಣ್ಣು ಭ್ರೂಣಹತ್ಯೆ ತಡೆಯಲು ಇರುವ ಕಾನೂನು ಬಗ್ಗೆ ಜಾಗೃತಿ ನೀಡಬೇಕು ಎಂದು ತಿಳಿಸಿದರು.

ಗರ್ಭಿಣಿಯ ಅಕಾಲಿಕ ಗರ್ಭಪಾತ, ಮೊದಲ ಮಗು ಹೆಣ್ಣು ಇದ್ದು, ಪುನಃ ಗರ್ಭಿಣಿಯಾದಾಗ ಆಗುವ ಗರ್ಭಪಾತ ಅಥವಾ ಶಿಶು ಮರಣ ಸಂಭವಿಸಿದ ಸನ್ನಿವೇಶಗಳನ್ನು ಗ್ರಾಮೀಣ ಮಟ್ಟದ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ತಾಯಿ ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದ ಸಿಬ್ಬಂದಿಯವರು ಗಮನಿಸಬೇಕು. ತಡೆಗೆ ಅಗತ್ಯ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಅರವಳಿಕೆ ತಜ್ಞರಾದ ಡಾ.ಶ್ವೇತಾ ಸಂಕನೂರು ಹಾಗೂ ವಕೀಲರಾದ ಸಿ.ಎಮ್. ಗುರುಬಸವರಾಜ್ ಅವರು ತರಬೇತಿ ಕಾರ್ಯಾಗಾರದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ವಿಮ್ಸ್‌ನ ನಿರ್ದೇಶಕ ಡಾಜಿ.ಟಿ.ಗಂಗಾಧರ ಗೌಡ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ವಿಜಯಕುಮಾರ್ ಕೆ.ಹೆಚ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶಬಾಬು, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಎನ್ ಬಸಾರೆಡ್ಡಿ, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮಿ ಮೈದೂರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಮಕೃಷ್ಣ ನಾಯಕ,ಎಂ., ಸಿಡಿಪಿಓ ನಾಗರಾಜ, ಡಾ.ಅಬ್ದುಲ್ಲಾ, ಡಾ.ಇಂದ್ರಾಣಿ, ಡಾ. ದುರ್ಗಪ್ಪ, ಚನ್ನಬಸವ ಮಕ್ಕಳ ರಕ್ಷಣಾಧಿಕಾರಿ(ಸಾಂಸ್ಥಿಕ), ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಸೇರಿದಂತೆ ಇತರರು ಉಪಸ್ಥಿತರಿದ್ದರು.

---

## ಹ.ಬೊ.ಹಳ್ಳಿ ಶ್ರೀಕಲ್ಲೇಶ್ವರ ಸ್ವಾಮಿ ರಥೋತ್ಸವ




■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಪಟ್ಟಣದ ಐತಿಹಾಸಿಕ ಶ್ರೀಕಲ್ಲೇಶ್ವರ ಸ್ವಾಮಿ ರಥೋತ್ಸವ ಮಂಗಳವಾರ ಸಂಜೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು. ಮಹಾಶಿವರಾತ್ರಿಯ ಜಾಗರಣೆಯ 3 ದಿನಗಳ ಬಳಿಕ ಜರುಗುವ ರಥೋತ್ಸವ ಈ ವರ್ಷ 66ನೇ ವರ್ಷದ ರಥೋತ್ಸವವಾಗಿದ್ದು, ಬೆಳಗ್ಗೆ ಶ್ರೀಸ್ವಾಮಿಗೆ ವಿಶೇಷ ಪೂಜೆ ಪುನಸ್ಕಾರಗಳು ಜರುಗಿದವು.

ಸಂಜೆ ಪಲ್ಲಕ್ಕಿಯಲ್ಲಿ ಶ್ರೀಸ್ವಾಮಿಯ ಮೂರ್ತಿಯನ್ನು ಹೊತ್ತು ವಿವಿಧ ವಾದ್ಯಗಳೊಂದಿಗೆ ಬಂದು, ರಥವನ್ನೇರಿದ ಬಳಿಕ ವಿವಿಧ ಘೋಷಣೆಗಳೊಂದಿಗೆ ರಥವು ಸಾಗಿತು. ಭಕ್ತರು ಹೂಹಣ್ಣು ಮೂಲಕ ಭಕ್ತಿಯ ಸಮರ್ಪಿಸಿದರು. ಶ್ರೀಕಲ್ಲೇಶ್ವರ ಸ್ವಾಮಿಯ ಪಟಾಕ್ಷಿಯನ್ನು ಜಾಲಿ ಕೊಟ್ರಮ್ಮ ಒಂದು ಲಕ್ಷ ಒಂದು ಸಾವಿರದ ಒಂದು ರೂ.ಗಳಗೆ ಭಕ್ತಿಪೂರ್ವಕವಾಗಿ ಪಡೆದರು.

ಶ್ರೀಸ್ವಾಮಿ ಸೇವಾ ಸಮಿತಿಯವರು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ರಥೋತ್ಸವ ಜರುಗುವಾಗ, ಭಕ್ತಿಯಿಂದ "ಶ್ರೀಕಲ್ಲೇಶ್ವರ ಸ್ವಾಮಿ ಈ ವರ್ಷ ನಾಡಿಗೆ ಉತ್ತಮ ಮಳೆ ಬೆಳೆಯಾಗುವಂತೆ ಕರುಣಿಸು ದೇವಾ" ಎಂದು ಬಾಳೆ ಹಣ್ಣಿನ ಮೇಲೆ ಬರೆದ ಯುವಕರು ಭಕ್ತಿಯಿಂದ ಎಸೆದರು.

---

## ಇಂದು ಜಿ ನಾಗಲಾಪುರದಲ್ಲಿ ಪುರಾಣ ಪ್ರವಚನ ಮಂಗಳೋತ್ಸವ

■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ

ಸಮೀಪದ ಜಿ. ನಾಗಲಾಪುರದ ಗ್ರಾಮದ ಶ್ರೀಗುರು ಒಪ್ಪತ್ತೇಶ್ವರಸ್ವಾಮಿ ವಿರಕ್ತಮಠದ ನಿರಂಜನಪ್ರಭು ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ಶೂನ್ಯಸಿಂಹಾಸನಾರೋಹಣ ಯಡೆಯೂರು ಶ್ರೀ ಸಿದ್ದಲಿಂಗೇಶ್ವರ ಪುರಾಣ ಪ್ರವಚನ ಮಂಗಳೋತ್ಸವ, 3001 ಮುತ್ತೈದೆಯರಿಗೆ ಉಡಿ ತುಂಬುವ ಸಮಾರಂಭದ ವಿವಿಧ ವಿಚಾರಗೋಷ್ಠಿಗಳ ಅಂಗವಾಗಿ ಜಿ. ನಾಗಲಾಪುರ ಗ್ರಾಮದ ಗುರು ಒಪ್ಪತ್ತೇಶ್ವರಸ್ವಾಮಿ ಮಠದ ಆವರಣದಲ್ಲಿ ಮಾ. 13 ರಂದು ಬುಧವಾರ ಬೆಳಿಗ್ಗೆ 10 ಗಂಟೆಗೆ ಬೃಹತ್ ರಕ್ತದಾನ ಶಿಬಿರ ಕಾರ್ಯಕ್ರಮ ನಡೆಯಲಿದೆ.

ವಿಜಯನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶಂಕರ್ ನಾಯ್ಕ, ತಾಲೂಕು ಆರೋಗ್ಯಾಧಿಕಾರಿ ಡಾ. ಭಾಸ್ಕರ್ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಸ್ಥಳೀಯ ಮುಖಂಡರು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಆರೋಗ್ಯ ಇಲಾಖೆಯ ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸುವವರು.

ಸಂಜೆ 7 ಗಂಟೆಗೆ ಯಡೆಯೂರು ಶ್ರೀ ಸಿದ್ದಲಿಂಗೇಶ್ವರ ಪ್ರವಚನ ಮಂಗಲೋತ್ಸವ ಸಮಾರಂಭ ನಡೆಯಲಿದ್ದು, ಶಿರಹಟ್ಟಿ - ಬಾಲೆಹೊಸೂರು ಭಾವೈಕ್ಯತಾ ಸಂಸ್ಥಾನಮಠದ ನಿರಂಜನ ಜಗದ್ಗುರು ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನ್ನಿಧ್ಯವಹಿಸುರು.

ಧಾರವಾಡದ ಶ್ರೀಮುರುಘಾ ಮಠದ ಡಾ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ಸಮಾರಂಭದ ನೇತೃತ್ವವಹಿಸುವರು. ಇಲ್ಲಕಲ್ಲ ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನಮಠದ ಗುರುಮಹಾಂತ ಮಹಾಸ್ವಾಮಿಗಳು ಸಭೆಯ ಅಧ್ಯಕ್ಷತೆವಹಿಸವರು.

ನೀಲಗುಂದ ಗುಡ್ಡದವಿರಕ್ತಮಠದ ಚನ್ನಬಸವ ಸ್ವಾಮಿಗಳು, ನಿರಡಗುಂಬ ಮಳ್ಚಿಮಾದ್ರಿ ವಿರಕ್ತಮಠಧ ಪಂಚಮ ಸಿದ್ದಲಿಂಗಸ್ವಾಮಿಗಳು, ಹೂವಿನ ಹಡಗಲಿಯ ಗವಿಮಠದ ಡಾ. ಹಿರಿಯ ಶಾಂತವೀರಸ್ವಾಮಿಗಳು, ನಿಡಗುಂದಿಕೊಪ್ಪ ಶಾಖಾ ಶಿವಯೋಗಮಂದಿರದ ಚನ್ನಬಸವ ಮಹಾಸ್ವಾಮಿಗಳು, ಖೇಳಗಿ ಶ್ರೀ ಶಿವಲಿಂಗೇಶ್ವರ ಸಂಸ್ಥಾನ ವಿರಕ್ತಮಠಧ ಶಿವಲಿಂಗ ಮಹಾಸ್ವಾಮಿಗಳು ಇವರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದೆ.

ನಿಡಗುಂದಿ ಅನುಭಾವಿಗಳಾದ ಶ್ರೀ ಸಿದ್ದಲಿಂಗ ಶಾಸ್ತ್ರೀಗಳು ಪ್ರವಚನಮಂಗಲ ನುಡಿ ನುಡಿಯುವರು.

ಸೋಮನಾಳದ ಶರಣಯ್ಯ ಗವಾಯಿಗಳು ಸಂಗೀತ ಸೇವೆ, ಮಲ್ಲಿಕಾರ್ಜುನ ಉಮಳಿಹೊಸೂರು ತಬಲ, ನಾರಾಯಣ ಹಿರೇಕೊಳಚಿ ವಾಯಲಿನ್ ನುಡಿಸುವರು. ಮುಖ್ಯಅತಿಥಿಗಳಾಗಿ ಶಾಸಕ ಎಚ್. ಆರ್. ಗವಿಯಪ್ಪ, ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳು, ಮುಖಂಡರು ಭಾಗವಹಿಸಲಿದ್ದಾರೆ. ಅಂತರಾಷ್ಟ್ರೀಯ ಖ್ಯಾತ ಹಾಸ್ಯ ಕಲಾವಿದ ಮಹಾದೇವಸತ್ತಿಗೇರಿಅವರಿಂದಹಾಸ್ಯಕಾರ್ಯಕ್ರಮ ನಡೆಯಲಿದೆ.

---

## ದಾಹ ನೀಗಿಸುವ ಅಮೃತದಾಯಿನಿ....!!

ಹಸಿದವನಿಗೆ ಒಂದು ತುತ್ತು ಅನ್ನ ಸಿಕ್ಕರೂ ಸಾಕು ಅವನ ಹಸಿವು ನೀಗಿ ಮೊಗವು ಅರಳುತ್ತದೆ. ಹಾಗೆಯೇ ಬಾಯಾರಿದವನಿಗೆ ಒಂದು ಬೊಗಸೆ ನೀರು ಸಿಕ್ಕರೆ ಸಾಕು ಅವನ ದಾಹ ತೀರುತ್ತದೆ, ಮನ ಕುಣಿಯುತ್ತದೆ. ನೀರೆಂದರೆ ಮಾಯೆ, ನೀರೆಂದರೆ ದೇವರು ನಮಗಾಗಿ ಕೊಟ್ಟ ಕೊಡುಗೆ ಹಾಗಾಗಿ ನೀರನ್ನು ಪೋಲು ಮಾಡದೇ ಬಳಸಿಕೊಳ್ಳಬೇಕು. ನೀರಿಲ್ಲದ ಜಗವನ್ನು ಊಹಿಸಿಕೊಳ್ಳಲು ಕೂಡ ಸಾಧ್ಯವಿಲ್ಲ. ಬೆಳಗ್ಗೆ ಎದ್ದೊಡನೆ ಹಲ್ಲು ಉಜ್ಜುವುದರಿಂದ ಹಿಡಿದು, ಎಲ್ಲಾ ಕಾರ್ಯಗಳಿಗೂ ನೀರಿನ ಅವಶ್ಯಕತೆ ಇದ್ದೇ ಇರುತ್ತದೆ.



ದಾಹ ತೀರಿಸಲಷ್ಟೇ ಅಲ್ಲದೇ ಪಾತ್ರೆ ತೊಳೆಯಲು, ಬಟ್ಟೆ ಒಗೆಯಲು, ಸ್ನಾನ ಮಾಡಲು, ಸ್ವಚ್ಛಗೊಳಿಸಲು, ಮರ ಗಿಡಗಳಿಗೆ ಪೋಷಣೆ ನೀಡಲು ಹೀಗೆ ಹಲವಾರು ಕಾರಣಗಳಿಗೆ ನೀರು ಬಲು ಅವಶ್ಯಕವಾಗಿದೆ. ನೀರಿನ ಬದಲಾಗಿ ಹಾಲು, ಮಜ್ಜಿಗೆ, ಮೊಸರು ಅಥವಾ ಇನ್ನಾವುದೇ ದ್ರವಗಳ ಬಳಕೆಯು ಸಾಧ್ಯವಿಲ್ಲ. ದಾಹ ತೀರಿಸಲು ಇರಬಹುದು ಅಥವಾ ಇನ್ನಾವುದೇ ಕೆಲಸ ಕಾರ್ಯಗಳಿಗೂ ಇರಬಹುದು ನೀರಿಗೆ ಸರಿಸಾಟಿ ಯಾವುದೂ ಇಲ್ಲ. ನಮ್ಮೆಲ್ಲರ ಬದುಕಿಗೆ ಅತ್ಯವಶ್ಯವಾಗಿ ಬೇಕಾಗಿರುವ ನೀರನ್ನು ಉಳಿಸಬೇಕು. ನೀರಿನ ನಲ್ಲಿಯಲ್ಲಿ ಅನಾವಶ್ಯಕವಾಗಿ ನೀರನ್ನು ಪೋಲು ಮಾಡಬಾರದು. ಎಲ್ಲೇ ಆಗಲಿ ನಲ್ಲಿಯಲ್ಲಿ ನೀರು ಪೋಲಾಗುತ್ತಿರುವುದನ್ನು ಕಂಡೊಡನೆ ತಕ್ಷಣ ನಲ್ಲಿಯನ್ನು ಬಂದ್ ಮಾಡಬೇಕು. ಎಲ್ಲರಿಗೂ ಅತಿ ಅವಶ್ಯಕವಾಗಿರುವ ನೀರು ಎಲ್ಲಿ ಪೋಲಾದರೂ ಎಲ್ಲರಿಗೂ ನಷ್ಟ ಎಂಬುದನ್ನು ಅರಿಯಬೇಕು.

ನಲ್ಲಿ ಬಿರುಕು ಬಿಟ್ಟು ನೀರು ಪೋಲಾಗುತ್ತಿದ್ದರೆ, ತಕ್ಷಣ ಬಿರುಕು ಬಿಟ್ಟ ಜಾಗವನ್ನು ಸರಿಪಡಿಸಿ ನೀರನ್ನು ಉಳಿಸಬೇಕು. ಜೀವಜಲದ ರಕ್ಷಣೆ ಅತ್ಯಗತ್ಯ. ಈಗೀಗ ಜೀವಜಲಕ್ಕಾಗಿ ಹಾತೊರೆಯುವ ಪರಿಸ್ಥಿತಿ ಬಂದಿದೆ ಎಂದರೆ ಅದು ನಮ್ಮಿಂದಲ್ಲದೆ ಮತ್ಯಾರಿಂದಲೂ ಅಲ್ಲ. ಇಂದು ಜೀವಜಲಕ್ಕಾಗಿ ಕೊಡ ಹಿಡಿದುಕೊಂಡು, ಸಾವಿರಾರು ಮೈಲಿಗಳ ದೂರ ಸಾಗಿ, ತಮ್ಮ ಮನೆ ಖರ್ಚಿಗಾಗಿ ನೀರು ತರುವುದನ್ನು ನಾವು ನೋಡುತ್ತಲೇ ಇದ್ದೇವೆ ಅಲ್ಲವೇ? ಈ ಪರಿಸ್ಥಿತಿಗೆ ಕಾರಣಕರ್ತರು ನಾವುಗಳೇ ಅಲ್ಲದೇ ಮತ್ತಿನ್ಯಾರು?

ಮಾನವರಾದ ನಾವುಗಳೇ ಸ್ವಾರ್ಥ ಮನೋಭಾವದಿಂದ ಆಕಾಶದೆತ್ತರಕ್ಕೆ ಬೆಳೆದು ನಿಂತಿದ್ದ ಮರಗಳನ್ನೆಲ್ಲಾ ಧರೆಗುರುಳಿಸಿ, ಕಾಲ ಕಾಲಕ್ಕೆ ತಕ್ಕಂತೆ ಮಳೆ ಇಲ್ಲದಂತೆ ಮಾಡುತ್ತೇವೆ. ಇದರಿಂದ ಬರಗಾಲ ಉಂಟಾಗಿ, ಕುಡಿಯಲು ನೀರಿಲ್ಲದೆ, ಉಣ್ಣಲು ಆಹಾರವಿಲ್ಲದೆ ನರಳಬೇಕಾದ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ಮರೆಯುತ್ತೇವೆ!!

ಕೃಷಿ ಕಾರ್ಯಕ್ಕೆ ಇರಬಹುದು ಅಥವಾ ಇತರ ಚಟುವಟಿಕೆಗಳಿಗೆ ಇರಬಹುದು ಅಲ್ಲಲ್ಲಿ ಭೂಮಿಯನ್ನು ಅಗೆಯುತ್ತೇವೆ ಹೀಗೇ ಮಾಡುವುದರಿಂದ ಭೂಮಿಯ ಒಳಗಿನ ನೀರಿನ ಆಗರ ಕಡಿಮೆಯಾಗುತ್ತಾ ಹೋಗುತ್ತದೆ ಎಂಬುದನ್ನು ಮರೆಯುತ್ತೇವೆ!!

ನೀರಿಗಾಗಿ ಅಲ್ಲಲ್ಲಿ ಭೂಮಿಯನ್ನು ಅಗೆಯುವುದರಿಂದ ನಮಗಷ್ಟೇ ಅಲ್ಲದೇ ನೆರೆ ಹೊರೆಯ ಮನೆಯವರ ನೀರಿನ ಆಗರಕ್ಕೂ ಪರಿಣಾಮ ಬೀರುತ್ತದೆ. ಪರಿಣಾಮವಾಗಿ ಯಾರಿಗೂ ಒಳ್ಳೆಯ ಪ್ರಮಾಣದಲ್ಲಿ ನೀರು ದೊರಕುವುದಿಲ್ಲ, ಇದರಿಂದ ಬೇಸಿಗೆ ಕಾಲದಲ್ಲಿ ಎಲ್ಲರೂ ಕೂಡ ನೀರಿಗಾಗಿ ಹಾತೊರೆಯುವ ಪರಿಸ್ಥಿತಿ ಬರುತ್ತದೆ.

ಬೇಸಿಗೆ ಕಾಲದಲ್ಲಿ ಸೂರ್ಯನ ಶಾಖಕ್ಕೆ, ಭೂಮಿಯಲ್ಲಿನ ನೀರಿನ ಆಗರಗಳಲ್ಲಿ ನೀರು ಆವಿಯಾಗುತ್ತಾ ಹೋಗುತ್ತದೆ. ಇದರಿಂದ ಇತರ ಕಾರ್ಯಗಳಿಗೆ ಬಿಡಿ ಕುಡಿಯಲು ಕೂಡ ನೀರು ಇಲ್ಲದಂತಹ ಪರಿಸ್ಥಿತಿ ಎದುರಾಗುತ್ತದೆ.

ಆವಿಯಾಗಿ ಆಕಾಶಕ್ಕೆ ಹೋದ ನೀರು ಮೋಡಗಳಾಗಿ ಮಳೆ ಸುರಿಸಿ, ನೀರಿನ ಪ್ರಮಾಣ ಹೆಚ್ಚಾಗಲು ಮನುಷ್ಯರಾದ ನಾವು ಬಿಡಬೇಕಲ್ಲ?!, ಹಣದ ದುರಾಸೆಯಿಂದ ದೊಡ್ಡ ದೊಡ್ಡ ಮರಗಳನ್ನು ಕಡಿದು ಮಾರುತ್ತೇವೆಯೇ ಹೊರತು ಅದರ ಬದಲಿಯಾಗಿ ಗಿಡ ನೆಡುವ ಗೋಜಿಗೇ ಹೋಗುವುದಿಲ್ಲ!!

ಇಂದು ನಮ್ಮ ಜೀವಜಲ ಬತ್ತುತ್ತಿದೆ ಎಂದರೆ ಅದಕ್ಕೆ ಕಾರಣ ನಾವುಗಳೇ ಹೊರತು ಮತ್ಯಾರಲ್ಲ. ನಮ್ಮ ಸ್ವಾರ್ಥಕ್ಕಾಗಿ ಜೀವಜಲವನ್ನು ಹಾಳು ಮಾಡಿದರೆ ಮುಂದೆ ನಾವೇ ಸಂಕಷ್ಟಕ್ಕೀಡಾಗುವ ಪರಿಸ್ಥಿತಿ ಬರುತ್ತದೆ. ಅಷ್ಟೇ ಅಲ್ಲದೇ ಈ ಜೀವಜಲವೆಂಬುದು ಮನುಷ್ಯನ ಉಳಿವಿಗೆ ಮಾತ್ರವಲ್ಲದೆ ಪ್ರಾಣಿ ಪಕ್ಷಿಗಳ ಉಳಿವಿಗೂ ಕೂಡ ಅತಿ ಅವಶ್ಯಕವಾಗಿ ಬೇಕಾಗುವುದರಿದ ಇಂದು ನಾವು ಜೀವಜಲವನ್ನು ಉಳಿಸದೇ ಹೋದರೆ ಆಹಾರ ಸರಪಳಿಯಲ್ಲಿ ಕೂಡ ವ್ಯತ್ಯಯ ಉಂಟಾಗಿ, ಮುಂದೆ ಅತಿ ದೊಡ್ಡ ಪ್ರಕೃತಿ ವಿಕೋಪಕ್ಕೆ ಕೂಡ ಕಾರಣರಾಗಬಲ್ಲೆವು ಎಂಬುದನ್ನು ಮರೆಯದಿರೋಣ.

**– ಪ್ರಜ್ಞಾ ರವೀಶ್, ಕುಳಮರ್ವ**

# ಕನ್ನಡದ ನೆಲದಲ್ಲಿ ಕನ್ನಡಕ್ಕೆ ಬರ

## ವ್ಯಾಪಾರ ವ್ಯವಹಾರದ ಮಾರುಕಟ್ಟೆ, ಪೇಟೆಗಳಲ್ಲಿ ಪ್ರಧಾನಗೊಳ್ಳದ ಕನ್ನಡದ ನಾಮ ಫಲಕಗಳು

## ಪ್ರಾಂಶುಪಾಲ ಡಾ.ಎನ್.ವಿಶ್ವನಾಥ ಗೌಡ ಅಭಿಮತ | ಕಾನೂನು ಕಡತಕ್ಕೆ ಸೀಮಿತವಾಗದಿರಲಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಮದ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯವು ಸಾಮಾಜಿಕ ಪ್ರಜ್ಞೆ ಬೆಳಸುವಲ್ಲಿ ಬಹಳ ಪ್ರಾಮುಖ್ಯತೆ ಹೊಂದಿದೆ ಎಂದು ಸ್ಥಳೀಯ ಬಸವ ಕೃಪಾ ನಿಧಿ ಆಶ್ರಮದ ಬಸವಕಿರಣ ಸ್ವಾಮಿ ಹೇಳಿದರು.

ಸ್ಥಳೀಯ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ನಗರದ ಷಾ ಭವರಲಾಲ್ ಬಾಬುಲಾಲ್ ನಹರ್ ಶಿಕ್ಷಣ ಮಹಾ ವಿದ್ಯಾಲಯ ಸಹಯೋಗದಲ್ಲಿ, ಬಿ.ಎಡ್. ಕಾಲೇಜಿನ ಸಭಾಂಗಣದಲ್ಲಿ ಸೋಮವಾರ ಜರುಗಿದ, ಶಾ ರತನಚಂದ್ ಜೈನ್, ಬಿ.ಎಸ್.ದೀಪಕಸಿಂಗ್ ಹಾಗೂ ಸೋ.ದಾ.ವಿರೂಪಾಕ್ಷಗೌಡ ಇವರ ದತ್ತಿಗಳ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ "ಮದ್ಯ ಕಾಲಿನ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ" ಕುರಿತು ಉಪನ್ಯಾಸ ನೀಡಿದರು. ಅದುವರೆಗೂ ಸಂಸ್ಕತ ಸಾಹಿತ್ಯವು ಮೇಲ್ವರ್ಗದವರಿಗಷ್ಟೇ ಮೀಸಲಾಗಿ ಶ್ರಮಿಕ ಜನರಿಗೆ ಹೊರತಾದ ಕಾರಣ, ಜನ ಸಾಮಾನ್ಯರಾರು ಸಾಹಿತ್ಯ ಓದುವಿಕೆ, ಆಸ್ವಾಧಿಸುವಿಕೆಯ ಸಾಮಾಜಿಕ ಪ್ರಜ್ಞೆ ತೋರುವಿಕೆಯೇ ಬಹು ದೂರವೆನಿಸಿತ್ತು. 12ನೇ ಶತಕದ ಬಸವಾದಿ ಪ್ರಮಥರ ಕನ್ನಡ ಸಾಹಿತ್ಯವು, ನಾಡಿನ ಕೆಳಸ್ಥರದೆಲ್ಲದರ ಜನ ಧ್ವನಿಯಾಗಿ, ಸಾಮಾಜಿಕ ಬದುಕಿನ ಚಿಂತನಾ ಪ್ರಜ್ಞೆಯನ್ನ ಬೆಳೆಸಿತು. ಶ್ರೀಸಾಮಾನ್ಯ ಶರಣರ ಅನುಭವ ಸಾಹಿತ್ಯದ "ವಚನ ಸಾಹಿತ್ಯ"ವು ಲೋಕವೇ ನಿಬ್ಬೆರಗಾಗುವಂತೆ ರಚಿತಗೊಂಡಿತು. ವಿವಿಧ ಕುಲ ಜಾತಿಗಳ ಸಮಸ್ತ ಶ್ರಮಿಕ ಜನತೆಯು,



ತಮ್ಮಗಳ ಕಾಯಕ ವೃತ್ತಿಯಲ್ಲಿಯೇ ನಾಡಿನ ಸಾಮಾಜಿಕ, ಧಾರ್ಮಿಕ, ವೈಚಾರಿಕತೆಯ ದೃಷ್ಠಿಯಲಿ ವಚನಗಳ ರಚಿಸುವುದರೊಂದಿಗೆ, ಬಸವಾದಿ ಪ್ರಮಥರಾದಿ 770 ಶರಣರು ಸಾಮಾಜಿಕ ಪ್ರಜ್ಞಾ ಸಬಲೀಕರಣಕೆ, ತಮ್ಮಯ ವಚನ ಸಾಹಿತ್ಯದ ಮೂಲಕ ಒತ್ತಾಸೆಯಾದರು ಎಂದರು.

ವಚನ ಸಾಹಿತ್ಯದ ಸಾಮಾಜಿಕ ಪ್ರಜ್ಞೆಯ ವಚನಾಂಧೋಲನದ ನಂತರ ದಾಸ ಸಾಹಿತ್ಯವೂ ಸಹ ಭಕ್ತಿ ಪಂಥದ ದಾಟಿಯೊಳಗೆ ದೇವರ ಆರಾಧನೆಯಲ್ಲಿ ಸಾಮಾಜಿಕ ಪ್ರಜ್ಞೆಯನ್ನ ಪ್ರತಿಧ್ವನಿಸಿದರೆಂದು ಎಂದು ಅವರು ಅಭಿಪ್ರಾಯ ಪಟ್ಟರು.

ಕಾಲೇಜಿನ ಪ್ರಾಂಶುಪಾಲ ಡಾ.ಎನ್.ವಿಶ್ವನಾಥ ಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕರ್ನಾಟಕದಲ್ಲೇ ಕನ್ನಡತನಕೆ ಬರ ಎನ್ನುವಂತಾಗುತಿದೆ. ನಾಡಿನಾದ್ಯಂತ ವ್ಯಾಪಾರ ವಾಣಿಜ್ಯದ ಮಳಿಗೆಗಳ ನಾಮಫಲಕಗಳಲಿ ಕನ್ನಡದ ಬರಹಕೆ ಸರ್ಕಾರ ಕಾನೂನು ಮಾಡಿದ್ದರೂ ಸಹ, ಇನ್ನೂ ಸಹ ನಾಡಿನ ವ್ಯಾಪಾರ ವ್ಯವಹಾರದ ಮಾರುಕಟ್ಟೆ ಹಾಗೂ ಪೇಟೆಗಳಲ್ಲಿ ಕನ್ನಡದ ನಾಮ ಫಲಕಗಳು ಪ್ರಧಾನಗೊಳ್ಳುತ್ತಿಲ್ಲ. ಕನ್ನಡ ನಾಡಿನಲ್ಲಿ ಕನ್ನಡ ಬಳಕೆ ನಮ್ಮ ಅಸ್ಮಿತೆ. ಕನ್ನಡದ ಜನತೆ ಕನ್ನಡದ ಜಾಗೃತಿ ಹೊಂದದಿರೇ, ನಮ್ಮ ಮುಂದಿನ ತಲೆಮಾರಿಗೆ ನಮ್ಮ ನೆಲದ ಕನ್ನಡವೇ ಕಾಣದಂತಾಗದೇನೋ., ನಾವು ಕನ್ನಡತನದ ಪ್ರಜ್ಞೆಯನ್ನ ನಮ್ಮ ಮುಂದಿನ ತಲೆಮಾರಿಗೆ ಕೊಂಡೋಯ್ಯಬೇಕಿದೆ. ಕನ್ನಡಿಗರು ಕನ್ನಡದ ಬಗ್ಗೆ ಕಲ್ಲಂತಾಗಿರದೇ ನಾಡಿನ ಕನ್ನಡ ಕೂಗಿಗೆ ಎಚ್ಚರಗೊಂಡು ತಾಯ್ಗನ್ನಡವ ಮೆರೆಸಬೇಕಿದೆ ಎಂದರು.

ಸ್ಥಳೀಯ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಸೌಭಾಗ್ಯಲಕ್ಷ್ಮಿ ಮಾತನಾಡಿ, ಎಲ್ಲೆಲ್ಲಿ ಜೀವ ಪರಿಸರವಿದೆಯೋ.. ಅಲ್ಲಲ್ಲಿ ಜೀವಂತಿಕೆಯ ಸಾಮಾಜಿಕ ಪ್ರಜ್ಞೆ ಇರಲೇಬೇಕು. ಬಸವಾದಿ ಶರಣರ ವಚನ ಸಾಹಿತ್ಯವು ಸಕಲರಿಗೂ ಲೇಸನೇ ಬಯಸುವ, ಅಂತರಂಗ ಶುದ್ಧಿ ಬಹಿರಂಗ ಶುದ್ಧಿ ಮಾಡಿಕೊಳ್ಳುವ, ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ, ಕಾಯಕ ದಾಸೋಹ ಪ್ರಸಾದ ಮೂಲಕ ಸಾಮಾಜಿಕ ಸಮಾನತಾ ಪ್ರಜ್ಞೆಯ ಲೋಕಕೆ ಸಾರಿದ್ದಾರೆ ಎಂದರು.

ನಿವೃತ್ತ ಕನ್ನಡ ಪ್ರಾಧ್ಯಾಪಕಿ ಡಾ.ಮೀನಾಕ್ಷಿ ಜಂಗಮನಿ ಮಾತನಾಡಿದರು . ಸ್ಥಳೀಯ ಕಲಾವಿಧ ಗಾಯಕ ನಟ ಎಸ್.ಎಸ್.ಚಂದ್ರಶೇಖರ ಅವರು ಟಿ.ಪಿ.ಕೈಲಾಸಂ ಕಾವ್ಯ ಗೀತೆಗಳನ್ನ ಹಾಡಿದರು. ಸಾಹಿತಿ ಸೋ.ದಾ.ವಿರೂಪಾಕ್ಷಗೌಡ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಉಪನ್ಯಾಸಕರಾದ ಜಗದೀಶ ಮತ್ತು ಸೂರಿಮಠ ಉಪಸ್ಥಿತರಿದ್ದರು. ಕು.ಪೂಜಾ ಮತ್ತು ಸಂಗಡಿಗರು, ಕು.ಎಮ್.ವಿ. ರಾಧಾರಾಜೇಶ್ವರಿ, ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಶಿವನಗೌಡ, ನಾಗರಾಜ ಗಂಟಿ, ಕ.ಸಾ.ಪ. ಪ್ರಧಾನ ಕಾರ್ಯದರ್ಶಿ ಮುದೇನೂರು ಉಮಾಮಹೇಶ್ವರ ನಿರ್ವಹಿಸಿದರು.

---

## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ । ಸಂವತ್ಸರ: ಶೋಭಾಕೃತ

**13–03–2024 – ಬುಧವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅಶ್ವಿನಿ |
| ಯೋಗ | : ಇಂದ್ರ |
| ಕರಣ | : ವಾಣಿಜ |
| ಸೂರ್ಯೋದಯ | : 06:38:37 |
| ಸೂರ್ಯಾಸ್ತ | : 18:34:11 |
| ರಾಹು | : 12.:36–14:06 |
| ಯಮಘಂಡ | : 08:08–09:38 |
| ಗುಳಿಕ | : 11:07–12:36 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 12–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.25 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 2042 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.846 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1599.47 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8005 ಕ್ಯುಸೆಕ್ |
| ಸಾಮರ್ಥ್ಯ | 20.851 ಟಿಎಂಸಿ |

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.

ಡಿ..ವಿ.ಜಿ.

---

# ಪ್ರಧಾನಿಮಂತ್ರಿಗಳಾದ ನರೇಂದ್ರ ಮೋದಿ ಅವರಿಂದ ಒಂದು ನಿಲ್ದಾಣ, ಒಂದು ಉತ್ಪನ್ನ ಮಳಿಗೆಗೆ ಚಾಲನೆ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಧಾನಿಮಂತ್ರಿಗಳಾದ ನರೇಂದ್ರ ಮೋದಿ ಅವರು ಇಂದು, ಬಳ್ಳಾರಿ ರೈಲ್ವೇ ನಿಲ್ದಾಣದಲ್ಲಿನ ನೂತನ "ಒಂದು ನಿಲ್ದಾಣ, ಒಂದು ಉತ್ಪನ್ನ" ಮಳಿಗೆಗೆ ವಿಡಿಯೋ ವರ್ಚುಯಲ್ ಮೂಲಕ ಚಾಲನೆ ನೀಡಿದರು.

ಸ್ಥಳೀಯ ಮಾರುಕಟ್ಟೆಯ ಉತ್ಪನ್ನಗಳಿಗೆ ಉತ್ತೇಜನ ನೀಡಲು ಬಳ್ಳಾರಿಯ ರೈಲ್ವೆ ನಿಲ್ದಾಣದಲ್ಲಿನ 'ಒಂದು ನಿಲ್ದಾಣ, ಒಂದು ಉತ್ಪನ್ನ' ಸ್ಟಾಲ್, ಟ್ರಾಲಿಗಳ ಲೋಕಾರ್ಪಣೆಗೊಳಿಸಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರೈಲ್ವೇ ಇಲಾಖೆಯ ಸುಮಾರು 85 ಸಾವಿರ ಕೋಟಿ ರೂ. ಅಧಿಕ ಮೊತ್ತದ ವಿವಿಧ ರೈಲ್ವೆ ಯೋಜನೆಗಳ ಶಂಕುಸ್ಥಾಪನೆ, ಲೋಕಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ 10 ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಯೋಜನೆಗಳಿಗೆ ಚಾಲನೆ ನೀಡಿದರು. ಬಳ್ಳಾರಿಯ ರೈಲ್ವೆ ನಿಲ್ದಾಣದಲ್ಲಿ ಆಯೋಜನೆ ಮಾಡಲಾಗಿದ್ದ ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಮೇಯರ್ ಬಿ.ಶ್ವೇತ ಅವರು ಭಾಗವಹಿಸಿದ್ದರು.

ಬಳಿಕ ಮಾತನಾಡಿದ ಅವರು, ಕೇಂದ್ರ ಸರ್ಕಾರದ ರೈಲ್ವೆ ಸಚಿವಾಲಯವು ಸ್ಥಳೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವ ದೃಷ್ಟಿಕೋನವನ್ನು ಹೊಂದಿದೆ. ಉತ್ಪನ್ನಗಳ ಮಾರಾಟ ಮಾಡಲು ಮಳಿಗೆ ಒದಗಿಸುವ ನಿಟ್ಟಿನಲ್ಲಿ 'ಒಂದು ನಿಲ್ದಾಣ ಒಂದು ಉತ್ಪನ್ನ' ಮಳಿಗೆಯನ್ನು ಬಳ್ಳಾರಿ ನಿಲ್ದಾಣದಲ್ಲಿ ನೂತನವಾಗಿ ಆರಂಭಿಸಲಾಗಿದ್ದು, ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ಹುಬ್ಬಳ್ಳಿ ವಲಯ ರೈಲ್ವೇ ಬಳಕೆದಾರರ ಸಲಹಾ ಸಮಿತಿಯ ಸದಸ್ಯ ರವಿ ಕುಮಾರ್ ಮಾತನಾಡಿ, ಸ್ಥಳೀಯ ಮಾರುಕಟ್ಟೆಯ ಉತ್ಪನ್ನಗಳಿಗೆ ಉತ್ತೇಜನ ನೀಡುವ ಯೋಜನೆ 'ಒಂದು ನಿಲ್ದಾಣ ಒಂದು ಉತ್ಪನ್ನ' ಆಗಿದ್ದು, ಸ್ಥಳೀಯ ಕುಶಲ ಕರ್ಮಿಗಳಿಗೆ ಉಪಯುಕ್ತವಾಗಲಿದೆ ಎಂದರು.

ಬಳ್ಳಾರಿ ರೈಲ್ವೆ ನಿಲ್ದಾಣದಲ್ಲಿ 'ಒಂದು ನಿಲ್ದಾಣ, ಒಂದು ಉತ್ಪನ್ನ' ಯೋಜನೆಯಡಿ ಸಂಡೂರು ಕರ ಕುಶಲ ಕೇಂದ್ರದ ಲಂಬಾಣಿ ಕಸೂತಿ ಕಲೆಯ ಉತ್ಪನ್ನಗಳಮಾರಾಟಮಳಿಗೆಆರಂಭಿಸಲಾಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಉಪ ಮೇಯರ್ ಬಿ.ಜಾನಕಿ, ಹಿಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷರಾದ ಮಹಾರುದ್ರ ಗೌಡ, ಚೇಂಬರ್ ಆಫ್ ಕಾಮರ್ಸ್‌ನ ಸದಸ್ಯ ರಾಮಚಂದ್ರಯ್ಯ, ಬಳ್ಳಾರಿ ರೈಲ್ವೆ ನಿಲ್ದಾಣದ ವ್ಯವಸ್ಥಾಪಕ ನಾಗೇಶ್ ಬಾಬು ಶರ್ಮಾ, ಮುಖ್ಯ ವಾಣಿಜ್ಯ ನಿರೀಕ್ಷಕ ಎಸ್. ಹೊನ್ನೂರಸ್ವಾಮಿ ಸೇರಿದಂತೆ, ಮಹಾನಗರ ಪಾಲಿಕೆಯ ಸದಸ್ಯರು, ರೈಲ್ವೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಇತರರುಉಪಸ್ಥಿತರಿದ್ದರು.

---

# ಮೋದಿ ಮತ್ತೊಮ್ಮೆ ಪ್ರಧಾನಿ ನಮ್ಮ ಸಂಕಲ್ಪ

## ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಜೀವ್ ರೆಡ್ಡಿ ಹೇಳಿಕೆ | ಮಾ.16 ಪದಗ್ರಹಣ



■ **ಹಂಪಿ ಟೈಮ್ಸ್ ಹರಪನಹಳ್ಳಿ**

ಭಾರತೀಯ ಜನತಾ ಪಾರ್ಟಿ ರಾಜ್ಯಾಧ್ಯಕ್ಷರಾದ ಬಿ ವೈ ವಿಜಯೇಂದ್ರ ನೇತೃತ್ವದಲ್ಲಿ ಹೊಸ ಅಲೆ ಆರಂಭವಾಗಿದೆ ವ್ಯಕ್ತಿಗಿಂತ ಪಕ್ಷ ದೊಡ್ಡದು ಪಕ್ಷಕ್ಕಿಂತ ದೇಶ ದೊಡ್ಡದು ಎಂಬ ತತ್ವದ ಅಡಿಯಲ್ಲಿ ಸಂಘಟನೆ ಮಾಡೋಣ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಜೀವ್ ರೆಡ್ಡಿ ಹೇಳಿದರು.

ಹರಪನಹಳ್ಳಿ ಪಟ್ಟಣದ ಮಾಜಿ ಪುರಸಭೆ ಅಧ್ಯಕ್ಷರಾದ ಹಾರಾಳ್ ಅಶೋಕ್ ಅವರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಕರೋನಾ ಸಂದರ್ಭದಲ್ಲಿ ಜನರ ಆರೋಗ್ಯ ರಕ್ಷಣೆಯಲ್ಲಿ ಬಿಜೆಪಿ ಸರ್ಕಾರದ ಸೇವೆ ಅಪಾರ. ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಭರವಸೆ ಮೇಲೆ ಅಧಿಕಾರಕ್ಕೆ ಬಂದಿದೆ. ಬಿ.ವೈ.ವಿಜಯೇಂದ್ರ ರಾಜ್ಯಾಧ್ಯಕ್ಷರನ್ನಾಗಿ ನೇಮಕಗೊಂಡ ಬಳಿಕ ರಾಜ್ಯದ ಕಾರ್ಯಕರ್ತರಲ್ಲಿ ಹೊಸ ಭರವಸೆ ಮೂಡಿದೆ. ರಾಜ್ಯದ ಎಲ್ಲಾ ಜಿಲ್ಲೆ, ತಾಲೂಕುಗಳಲ್ಲಿ ಈಗಾಗಲೇ ಹೊಸ ಪದಾಧಿಕಾರಿಗಳನ್ನು ನೇಮಗೊಳಿಸಿದ್ದಾರೆ.

ಪ್ರತಿ ಗ್ರಾಮಗಳಲ್ಲಿ ಗ್ರಾಮ ಚಲೋ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಒಂದು ಬೂತಿಗೆ ಒಬ್ಬ ಕಾರ್ಯಕರ್ತ ನೇಮಕ ಮಾಡಿ ಪಕ್ಷದ ಕಾರ್ಯಕ್ರಮಗಳನ್ನ ತಳಮಟ್ಟದಲ್ಲಿ ಪ್ರಚಾರಪಡಿಸಿ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಮತ್ತು ಕೇಂದ್ರದಲ್ಲಿ ಮತ್ತೊಮ್ಮೆ ನರೇಂದ್ರ ಮೋದಿಯವರನ್ನ ಪ್ರಧಾನ ಮಂತ್ರಿ ಮಾಡಲು ಪಣತೊಟ್ಟಿದ್ದೇವೆ.

ಭಾರತೀಯ ಜನತಾ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ ರಾಜೀವ್ ಅವರ ನೇತೃತ್ವದಲ್ಲಿ ಹರಪನಹಳ್ಳಿ ತಾಲೂಕಿನ ಪ್ರತಿ ಗ್ರಾಮಗಳ ಅಲ್ಲಿನ ಕಾರ್ಯಕರ್ತರನ್ನ ಸಭೆ ಕರೆದು ಪ್ರತಿಯೊಬ್ಬರ ಕಾರ್ಯಕರ್ತರ ಅಭಿಪ್ರಾಯವನ್ನು ಸಂಗ್ರಹಿಸಿ

> ನಾನು 30 ವರ್ಷಗಳಿಂದ ಪಕ್ಷದ ಕಾರ್ಯಕರ್ತನಾಗಿ ಪಕ್ಷಕ್ಕೆ ದುಡಿದಿದ್ದೇನೆ ಪಕ್ಷ ನನ್ನ ಕಾರ್ಯ ನೋಡಿ ಮತ್ತೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ.ಹರಪನಹಳ್ಳಿ ತಾಲೂಕಿನ ಮಾಜಿ ಶಾಸಕರು ಮಾಜಿ ಸಚಿವರು ನನ್ನ ರಾಜಕೀಯ ಮಾರ್ಗದರ್ಶಕರು. ಅವರ ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ ಮಾಡಲು ಉತ್ಸಕನಾಗಿದ್ದೇನೆ
>
> **– ಕೆ ಲಕ್ಷ್ಮಣ್, ಮಂಡಲ ಅಧ್ಯಕ್ಷರು**

ಅಂತಿಮವಾಗಿ ಅಭಿಪ್ರಾಯದ ವರದಿಯನ್ನು ರಾಜ್ಯದ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಿಗೆ ವರದಿ ಸಲ್ಲಿಸಿ ಅಂತಿಮವಾಗಿ ಹರಪನಹಳ್ಳಿ ತಾಲೂಕಿನ ಭಾರತೀಯ ಜನತಾ ಪಕ್ಷದ ತಾಲೂಕಿನ ಮಂಡಲದ ಅಧ್ಯಕ್ಷರಾಗಿ ಕೆ ಲಕ್ಷ್ಮಣ್ ರವರನ್ನು ಆಯ್ಕೆ ಮಾಡಿ ಆದೇಶ ಹೊರಡಿಸಿದ್ದಾರೆ ಎಂದರು.

ಮಾ.16 ರಂದು ಶನಿವಾರ ತರಳುಬಾಳು ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 10:30 ಕ್ಕೆ ಹೊಸ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ ದಾವಣಗೆರೆ ಜಿಲ್ಲೆಯ ಲೋಕಸಭಾ ಸದಸ್ಯ ಜಿಎಂ ಸಿದ್ದೇಶ್ ಮತ್ತು ಬಳ್ಳಾರಿ ಜಿಲ್ಲೆಯ ಅಧ್ಯಕ್ಷರುಗಳು ರಾಜ್ಯದ ಮಾಜಿ ಸಚಿವರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ ಎಂದು ಹೇಳಿದರು

ಜಿ ನಂಜನ ಗೌಡ. ರಾಜ್ಯ ಸಹಕಾರ ಸೌಹಾರ್ದ ಬ್ಯಾಂಕ್ ಅಧ್ಯಕ್ಷರು ಹಾರಾಳ್ ಅಶೋಕ್. ಜಿಲ್ಲಾ ಕಣಿವೆಹಳ್ಳಿ ಮಂಜುನಾಥ್. ಜಿಲ್ಲಾ ಎಸ್ ಸಿ ಮೋರ್ಚ ಪ್ರಧಾನ ಕಾರ್ಯದರ್ಶಿ ಕುಸುಮ ಜಗದೀಶ್. ಜಿಲ್ಲಾ ಕಾರ್ಯದರ್ಶಿ ಉದಯಕುಮಾರ್. ಮಂಡಲ ಪ್ರಧಾನ ಕಾರ್ಯದರ್ಶಿ ಹಲವಾಗಲು ದ್ಯಾಮಜ್ಜ. ಜಿಲ್ಲಾ ಓಬಿಸಿ ಮೋರ್ಚ ಉಪಾಧ್ಯಕ್ಷರು ಸಿಂಗ್ರಿಹಳ್ಳಿ ಮರಿಯಪ್ಪ. ಚನ್ನನಗೌಡ. ಕಡಿತಿ ರಮೇಶ್. ಸಿದ್ದನಗೌಡ. ಎಲ್ ಮಂಜ ನಾಯ್ಕ ಜಟಪ್ಪ. ಸಂತೋಷ್. ಉಪಸ್ಥಿತರಿದ್ದರು

---

# ಅಂಜನಾದ್ರಿಯು ತಿರುಪತಿ, ಅಯೋಧ್ಯೆಯಂತಾಗಲಿದೆ

■ **ಹಂಪಿ ಟೈಮ್ಸ್ ಕೊಪ್ಪಳ**

ಚಾರಿತ್ರ್ಯಿಕ ಹಿನ್ನೆಲೆಯ ಈ ಪುಣ್ಯಭೂಮಿಯಲ್ಲಿ ತಾವು ಶಾಸಕರಾಗಿರುವುದು ತಮ್ಮ ಪೂರ್ವಜನ್ಮದ ಪುಣ್ಯದ ಫಲವಾಗಿದೆ ಎಂದು ತಾವು ಭಾವಿಸಿರುವುದಾಗಿ ಗಂಗಾವತಿ ವಿಧಾನಸಭಾ ಕೇತ್ರದ ಶಾಸಕರಾದ ಜಿ ಜನಾರ್ಧನ ರೆಡ್ಡಿ ಅವರು ಹೇಳಿದರು. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಗಂಗಾವತಿ ತಾಲೂಕಿನ ಆನೆಗೊಂದಿಯ ಉತ್ಸವ ಮೈದಾನದಲ್ಲಿ ಸೋಮವಾರ ನಡೆದ ಐತಿಹಾಸಿಕ ಆನೆಗೊಂದಿ ಉತ್ಸವದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆನೆಗೊಂದಿಯ ಈ ಪ್ರದೇಶವು ಹಕ್ಕ–ಬುಕ್ಕರು ಸ್ಥಾಪಿಸಿದ ಪುಣ್ಯಭೂಮಿಯಾಗಿದೆ. ಹನುಮ ಜನಿಸಿದ ತಾಯಿ ನಾಡು ತಮ್ಮದು ಎಂದು ಹೇಳಲು ತಮಗೆ ಹೆಮ್ಮೆಯ ಅನಿಸುತ್ತದೆ ಎಂದರು.

ಮಾನ್ಯ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರು ಇತ್ತೀಚೆಗೆ ಮಂಡಿಸಿದ ಬಜೆಟ್‌ನಲ್ಲಿ ಅಂಜನಾದ್ರಿಗೆ 100 ಕೋಟಿ ರೂ. ಮೀಸಲಿರಿಸಿದ್ದಾರೆ. ಪ್ರತಿ ವರ್ಷ ಸಹ ಅಂಜನಾದ್ರಿಗೆ 100 ಕೋಟಿ ರೂ ಕೊಡುವುದಾಗಿ ಮತ್ತು ಅದರಿಂದ ಅಂಜನಾದ್ರಿ ಅಭಿವೃದ್ಧಿಪಡಿಸಿ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದು ಅಭಿನಂದನಾರ್ಹ ಸಂಗತಿ. ಈಗ ಬಿಡುಗಡೆಯಾದ ಅನುದಾನದಲ್ಲಿ ಹಂತಹಂತವಾಗಿ ಅಂಜನಾದ್ರಿಯನ್ನು ಅಭಿವೃದ್ಧಿಪಡಿಸಲಾಗುವುದು. ತಿರುಪತಿ, ಅಯೋಧ್ಯೆಯಂತೆ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಅವರು ತಿಳಿಸಿದರು. ಅಂಜನಾದ್ರಿ ಅಭಿವೃದ್ಧಿಗೆ ಸಾಕಷ್ಟು ಶ್ರಮವಹಿಸಬೇಕು. ಇದಕ್ಕೆ ಸಾಕಷ್ಟು ಸಮಯವಕಾಶ ಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

---

# ಮಾ.13, ಪ್ರಧಾನಮಂತ್ರಿ ಸುರಜ್ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**

ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಹಣಕಾಸು ಸೇವಾ ಇಲಾಖೆ ಮತ್ತು ರಾಜ್ಯ ಮಟ್ಟದ ಬ್ಯಾಂಕರ್ ಸಮಿತಿ, ಕರ್ನಾಟಕ ಇವರ ಆದೇಶದಂತೆ ಕೆನರಾ ಬ್ಯಾಂಕ್ ಜಿಲ್ಲಾ ಪ್ರಧಾನ ಕಚೇರಿ ವತಿಯಿಂದ ಮಾ.13 ರಂದು ಮಧ್ಯಾಹ್ನ 01 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಪ್ರಧಾನಮಂತ್ರಿ ಸುರಜ್ ಕಾರ್ಯಕ್ರಮವನ್ನು ನಗರದ ಜಿಪಂ ನಜೀರ್‌ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ನಿಗಮಗಳ ಯೋಜನೆಯ (ಪರಿಶಿಷ್ಟ ಜಾತಿಗಳು, ಸಫಾಯಿ ಕರ್ಮಚಾರಿಗಳು ಮತ್ತು ಹಿಂದುಳಿದ ವರ್ಗಗಳ) ಫಲಾನುಭವಿ ಗಳೊಂದಿಗೆ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರು ವಿಡೀಯೋ ಸಂವಾದ ನಡೆಸುವರು ಎಂದು ಎಲ್‌ಡಿಸಿಎಂ ಸೋಮನಗೌಡ ಐನಾಪುರ ಅವರು ತಿಳಿಸಿದ್ದಾರೆ.






Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA